Fifth Report of the Committee on Subordinate Legislation–Presentation

SRI M. B. RAMASWAMY (Anekal).— Madam, I beg to present the Fifth Report of the Committee on Subordinate Legislation.

MADAM SPEAKER.—The report is presented.

Matter Under Rule 312

re ; disposal of levy paddy by Government.

† ಶ್ರೀ ಹೆಚ್. ಡಿ. ದೇವೇಗೌಡ (ಹೊಳೇನರಸೀಪುರ) .— ಮಾನ್ಯ ಸಭಾಧ್ಯಕ್ಷಿಣಿಯವರೆ, ನಾನು ಮತ್ತು ನನ್ನ ಇಬ್ಬರು ಮಿತ್ರರಾದ ಸರ್ವಶ್ರೀ ಕಾಗೋಡು ತಿಮ್ಮಪ್ಪನವರು ಹಾಗೂ ಬೈರೇಗೌಡರೂ ಸೇರಿ 312ನೇ ನಿಯಮದ ಪ್ರಕಾರ ರಾಜ್ಯಸರ್ಕಾರದವರು ನಮ್ಮ ರಾಜ್ಯದಲ್ಲಿರ ತಕ್ಕಂಥ ಭತ್ತದ ದಾಸ್ತಾನು ಏನಿದೆ ಅದನ್ನು ಈಗ ಮಾರಾಟ ಮಾಡುವುದಕ್ಕಾಗಿ ಕೊಟೇಷನ್ ಗಳನ್ನು ಕರೆದಿದ್ದಾರೆ, ಮತ್ತು ಅದನ್ನು ಸ್ವೀಕರಿಸುವ ಹಂತದಲ್ಲಿದ್ದಾರೆಂದು ತಿಳಿದಮೇಲೆ ಇದು ಬಹಳ ಜರೂರಾದ ಪ್ರಶ್ನೆ ಈ ಒಂದು ಪ್ರಶ್ನೆಯನ್ನು ಪ್ರಸ್ತಾಪ ಮಾಡುವುದಕ್ಕೆ ನಮಗೆ ಅವಕಾಶ ವನ್ನು ಮಾಡಿಕೊಡಬೇಕೆಂದು ಮನವಿ ಸಲ್ಲಿಸಿದ್ದೆವು. ತಾವು ಅದಕ್ಕೆ ಮನ್ನಣೆ ಕೊಟ್ಟು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶವನ್ನು ಮಾಡಿ ಕೊಟ್ಟಿದ್ದಕ್ಕಾಗಿ ಪ್ರಥಮವಾಗಿ ತಮಗೆ ನನ್ನ ಧನ್ಯವಾದಗಳನ್ನರ್ಪಿಸುತ್ತೇನೆ.

ಮಾನ್ಯ ಸಭಾಧ್ಯಕ್ಷಿಣಿಯವರೆ, ಈ ಸಾರಿ ನಮ್ಮ ರಾಜ್ಯದಲ್ಲಿ ಭೀಕರ ಬರಗಾಲ ಪರಿಸ್ಥಿತಿ ಅಂದೊಡಗಿರುವ ಸನ್ನಿವೇಶದಲ್ಲಿ ನಮ್ಮಲ್ಲಿರತಕ್ಕಂಥ ಭತ್ತದ ದಾಸ್ತಾನು ಏನಿದೆ ಇದು ಇವತ್ತಿನ ನಮ್ಮ ರಾಜ್ಯದ ಅವಶ್ಯಕತೆಯನ್ನು ಪೂರೈಸುವುದಕ್ಕೆ ಸಾಧ್ಯವಿಲ್ಲವೆಂದು ನನ್ನ ಭಾವನೆ. ಬದರೆ ಸರ್ಕಾರದವರು ನಮ್ಮಲ್ಲಿರತಕ್ಕ ದಾಸ್ತಾನು ಅಧಿಕವಾಗಿದೆ, ಈ ಸಾರಿ ಹೆಚ್ಚಿನ ರೀತಿಯಲ್ಲಿ ಶೇಖರಣೆ ಮಾಡಿದ್ದೇವೆ ಎಂದು ಕೋಟೆಷನ್ ಕರೆದು ಬಹಿರಂಗವಾಗಿ ಮಾರಾಟ ಮಾಡುತ್ತೇವೆಂದು ಹೇಳಿದ್ದೀರಿ. ಇದನ್ನು ನಾನು ಪತ್ರಿಕೆಗಳಲ್ಲಿ ನೋಡಿದ್ದೇನೆ. ಮತ್ತು ತಾವು ಈ ಕೋಟೆಷನು ಗಳನ್ನು ಸ್ವೀಕಾರ ಮಾಡುವ ಕೂನೆಯ ಹಂತದಲ್ಲಿಯೂ ಇದ್ದೀರಿ ಎಂದು ತಿಳಿದಿದ್ದೇನೆ.

ಮಾನ್ಯ ಸಭಾಧ್ಯಕ್ಷರೇ, ನಾನು ಕೆಲವು ವಿಷಯಗಳನ್ನು ಸಂಗ್ರಹ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ನಮ್ಮ ರಾಜ್ಯದಲ್ಲಿ ಈ ಸಾರಿ 3 ಲ ಟನ್ ಭತ್ತದ ದಾಸ್ತಾನು ಮಾಡಿದ್ದೀರಿ ಎಂದು ಕೇಳಿದ್ದೇನೆ ಇಷ್ಟಕ್ಕೆ ಸುಮಾರು 38—39 ಕೋಟಿ ರೂಪಾಯಿಗಳನ್ನು ವೆಚ್ಚಮಾಡಿ ದ್ದೀರಿ ಎಂಬುದನ್ನೂ ತಿಳಿದುಕೊಂಡಿದ್ದೇನೆ. ಈ ಒಂದು ದಾಸ್ತಾನು ಏನಿದೆ ಇದನ್ನು ಶೀರ್ತಿ ಯಾಗಿ ಇಟ್ಟುಕೊಳ್ಳುವ ಅವಶ್ಯಕತೆ ಏನೂ ಇಲ್ಲವೆಂದು ಭಾವಿಸಿ ಸುಮಾರು ಒಂದು—ಒಂದೂವರೆ ಲಕ್ಷ ಟನ್‌ನ್ನು ಮಾರಾಟ ಮಾಡುವುದಕ್ಕೋಸ್ಕರ ಪ್ರಯತ್ನ ಮಾಡಿದ್ದೀರಿ. ಇದರಲ್ಲಿ ನನ್ನ ವ್ಯಯ ಕ್ಕಿಂತ ಅಧಿಪ್ರಾಯವನ್ನು ಹೇಳಿದರೆ ಅವಕ್ಕೆ ತಾವೂ ಪುರಸ್ಕಾರ ನೀಡುತ್ತೀರಿ ಹಾಗೂ ಸಭೆಯೂ ಕೂಡ ಪುರಸ್ಕಾರವನ್ನು ನೀಡುತ್ತದೆಂದು ಆಶಿಸುತ್ತೇನೆ.

ಮಾನ್ಯ ಸಭಾಧ್ಯಕ್ಷಿಣಿಯವರೆ, ಈ ಸಾರಿ ಮೈನರ್ ಇರಿಗೇಷನ್ ಇರುವ ಕಡೆಗಳಲ್ಲಿ ಕೆರೆ ಗಳಿಗೆ ನೀರು ಬರಲಿಲ್ಲ ಎಂದೂ ಬೆಳೆಯನ್ನು ಯಾರೂ ಇಟ್ಟಿಲ್ಲ ಮೈನರ್ ಇರಿಗೇಷನ್ ಇರುವ ಕಡೆ ಗಳಲ್ಲಿ ಬೆಳೆಯನ್ನು ಇಟ್ಟಿದ್ದಾರೆ. ಈ ರೀತಿ ಬೆಳೆಯನ್ನು ಇಟ್ಟಿದ್ದರೂ ಕೂಡ ಮೇಲು ಮಳೆ ಬಾರದೇ ಇರುವುದರಿಂದ ಬರಬೇಕಾದ ಬೆಳೆಯೆಲ್ಲ ಹುಲುಸಿಲ್ಲದೆ, ಜೊಳ್ಳಾಗಿ, ಕಡಿಮೆ ಬೆಳೆ ಯಾಗುತ್ತದೆ ಇದು ಎಲ್ಲರಿಗೂ ತಿಳಿದಿರುವ ವಿಷಯ. ಇಂಥ ಸನ್ನಿವೇಶದಲ್ಲಿ ನಮ್ಮ ರಾಜ್ಯ ಸರ್ಕಾರದವರು ಈ ವರ್ಷ ಸುಮಾರು ಎರಡೂವರೆ ಲಕ್ಷ ಟನ್ ಭತ್ತ ಬರುತ್ತದೆ ಎಂಬ ಒಂದು ಗುರಿಯನ್ನು ಇಟ್ಟುಕೊಂಡಿದ್ದಾರೆಂದು ಪತ್ರಿಕೆಗಳಲ್ಲಿ ನೋಡಿ ತಿಳಿದುಕೊಂಡ್ದಿದೇನೆ. ತಾವು ಈ ರೀತಿ ಏನು ಎರಡೂವರೆ ಲಕ್ಷ ಟನ್ ಬರುತ್ತದೆಂದು ಟಾರ್ಗೆಟ್‌ನ್ನು ನಿಗದಿ ಮಾಡಿಕೊಂಡಿದ್ದೀರಿ

ಇದು ನಿಜವಾಗಿಯೂ ಕೇವಲ ಒಂದು ಉತ್ಪ್ರೇಕ್ಷೆಯಿಂದ ಕೂಡಿದ್ದು ಪ್ರಾಕ್ಟಿಕಲ್ ಆಗಿ ಇದು ಸಾಧ್ಯವಿಲ್ಲ ಎಂಬುದನ್ನು ನಾನು ಹೇಳಬಯಸುತ್ತೇನೆ. ಏಕೆಂದರೆ ಸಾತ್ ಕೆನರಾ, ನಾರ್ತ್ ಕೆನರಾಗಳಲ್ಲಿ ಮಳೆ ದಾರಾಳ ಫಸಲು ಹುಲುಸಿಲ್ಲ ಎಂದು ಕೇಳಿದ್ದೇನೆ. ಮುಂಡ್ಯ ಜಿಲ್ಲೆಯಲ್ಲಿಯೂ ಕೂಡ ಈ ಸಾರಿ ಫಸಲು ಸರಿಯಾಗಿ ಹುಲುಸಿಲ್ಲವೆಂದು ಕೇಳಿದ್ದೇನೆ. ಇಂಥ ಸಂದರ್ಭದಲ್ಲಿ ನನ್ನ ವಾದವನ್ನು ಬೇರೆ ಕಡೆಗೆ ತೆಗೆದುಕೊಂಡು ಹೋಗುವುದಕ್ಕೆ ಇಷ್ಟಪಡುವುದಿಲ್ಲ. ಈಗ ಕೃಷ್ಣರಾಜ ಸಾಗರದಲ್ಲಿ 110 ಅಡಿ ನೀರು ಇದೆ ಎಂದು ಕೇಳಿದ್ದೇನೆ. ಮತ್ತು ಮದ್ರಾಸ್ ಸರ್ಕಾರದವರಿಗೆ ಕೊಡಬೇಕಾದ ನೀರಿನ ಭಾಗವನ್ನು ಕಡಿಮೆ ಮಾಡಿದ್ದೀರಿ ಇದಕ್ಕೆ ನನ್ನ ಸಂತೋಷವನ್ನು ವ್ಯಕ್ತಪಡಿಸುತ್ತೇನೆ.

10-30 A. M.

ಆದ್ದರಿಂದ ಈವತ್ತು ರಾಜ್ಯಸರ್ಕಾರದವರು ಏನು ಒಂದು ಅಭಿಪ್ರಾಯವನ್ನು ಇಟ್ಟುಕೊಂಡಿರುತ್ತಾರೆಂದು ಎರಡೂವರೆ ಲಕ್ಷ ಟನ್ ಪ್ರೊಕ್ಯೂರ್‌ಮೆಂಟ್ ಮಾಡುತ್ತೇವೆಂದು, ಅದು ಬಹುಶಃ ಕನಸಿನ ಮಾತಾಗುತ್ತದೆ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತಂದರೆ ಕ್ಷಮೆಯಿರಲಿ ಎಂದು ತಿಳಿಯಬಯಸುತ್ತೇನೆ.

ಮಾನ್ಯ ಸಭಾಧ್ಯಕ್ಷರಾಯವರೆ ಮತ್ತೊಂದು ವಾದ. ನಿರೀಕ್ಷಣೆ ಮಾಡುತ್ತಿದ್ದೇವೆ ಎಂದು ಹೇಳಿದಿರಿ. ಆದ್ದರಿಂದ ಈ ವಾದವನ್ನು ಮುಂದಿಟ್ಟು ಹೋಗುವುದಾದರೆ ನೀವು ಏನು ಮಾಡಿದ್ದೀರಿ ಎಂದರೆ ಮೂರು ಲಕ್ಷ ಟನ್ ಹೆಡ್ ಸ್ಟಾಕ್ ಇದೆ ಎಂದು ಹೇಳಿರುತ್ತೀರಿ. ಇವನ್ನು ಹೇಳಬೇಕು ಎನ್ನುವ ದೃಷ್ಟಿಯಿಂದ ಮುಂದೆ ಹೋಗುತ್ತೇನೆ. ಕಳೆದ 8-9 ತಿಂಗಳಿಂದ ಪಬ್ಲಿಕ್ ಡಿಸ್ಟ್ರಿಬ್ಯೂಷನ್ ಆಧಾರದ ಮೇಲೆ ಪ್ರೊಕ್ಯೂರ್‌ಮೆಂಟ್ ಮಾಡಿರುವುದು ಎಂದು ಅರ್ಥ ಮಾಡಿಕೊಳ್ಳುವುದರಿಂದ ಈವತ್ತು ಮಾರ್ಕೆಟಿನಲ್ಲಿ ವಿಶೇಷವಾಗಿ ಹೋಗುತ್ತಿರುವುದು ರಾಗಿ. ಇದು ಸಾಮಾನ್ಯ ಮನುಷ್ಯನ ಆಹಾರವಾಗಿರುತ್ತದೆ. ಇದು ಎಲ್ಲರಿಗೂ ಕಾಮನ್ ಫುಡ್ ಆಗಿರುತ್ತದೆಂದು ತಾವೇ ಹೇಳುತ್ತಿರುವಾಗ ಒಂದು ಲಕ್ಷ ಟನ್ ಮಾತ್ರ ಇದೆ ಎಂದು ಹೇಳುತ್ತೀರಿ. ಇದನ್ನು ಬಿಡುಗಡೆ ಮಾಡಿದರೆ ಕೇವಲ 15 ದಿವಸಗಳಲ್ಲಿ ಮುಗಿದು ಹೋಗುತ್ತದೆಂದೂ ಕೂಡ ಈ ಸಭೆಯಲ್ಲಿ ತಿಳಿಸಿದ್ದೀರಿ. ಆದುದರಿಂದ ಈವತ್ತು ರಾಗಿ ನಮ್ಮಲ್ಲಿರತಕ್ಕಂಥ ದಾಸ್ತಾನು ಕೇವಲ 15 ದಿವಸಗಳಿಗೆ ಸಾಕಾಗುವುದಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಮೇಲೆ, ಮುಂದಿನ 9 ತಿಂಗಳ ಕಾರ್ಯಕ್ರಮವನ್ನು ಇಟ್ಟುಕೊಳ್ಳುವ ದಿಸೆಯಲ್ಲಿ ಸರ್ಕಾರ ಹೋರಾಟ ಮಾಡಬೇಕಾಗುತ್ತದೆ. ರಾಗಿ ಬಹಿರಂಗ ಮಾರಾಟವಿಲ್ಲ ರಾಜ್ಯದಲ್ಲಿ ದಾಸ್ತಾನು ಇಲ್ಲ ಎನ್ನುವುದನ್ನು ಮನನ ಮಾಡಿಕೊಂಡಮೇಲೆ ನಷ್ಟಕ್ಕೆ ಒಳಗಾದರೂ ನಾವು ಅಕ್ಕಿಗೆ ಹೋಗಬೇಕಾಗುತ್ತದೆ. ಆದರೆ ಅಕ್ಕಿ ಬೆಲೆ ರಾಗಿಗಿಂತ ಜಾಸ್ತಿ ಆದಾಗ ಕಷ್ಟವಾಗುತ್ತದೆ. ಏತಕ್ಕೆಂದರೆ ರಾಗಿ ತಡೆದುಬರುತ್ತದೆ ಎನ್ನುವ ಸಂದರ್ಭದಲ್ಲಿ ಅದನ್ನು ಸಾಮಾನ್ಯ ಜನರು ಕೊಂಡುಕೊಳ್ಳುವುದು ಜಾಸ್ತಿಯಾಗುತ್ತದೆ. ಮಾರ್ಕೆಟಿನಲ್ಲಿ ಹೇಳುತ್ತಾರೆ ರಾಗಿಯ ದಾಸ್ತಾನು ಸರ್ಕಾರದಲ್ಲಿ ಸಾಕಷ್ಟು ಇಲ್ಲ. ಮಾರ್ಕೆಟಿಗೆ ಒದಗಿಸುವುದಕ್ಕೆ ಸಮರ್ಥವಿಲ್ಲವೆಂದು ಹೇಳುತ್ತಾರೆ. ಆದ್ದರಿಂದ ಮಾರ್ಕೆಟಿನಲ್ಲಿ ಯಾವಾಗ ರಾಗಿ ಸಿಕ್ಕಲಿಲ್ಲವೋ ಆಗ ನಮ್ಮ ಜನ ಅಕ್ಕಿಯನ್ನೇ ತೆಗೆದುಕೊಂಡು ತಿನ್ನಬೇಕಾಗುತ್ತದೆ. ಕಳೆದ 7, 8 ತಿಂಗಳಿಂದ ನಮ್ಮ ಅನುಭವದ ಮೇಲೆ ಹೇಳುವುದಾದರೆ ಅಕ್ಕಿಯ ಮೂವ್‌ಮೆಂಟ್ ಇಲ್ಲವೆಂದು ಹೇಳುವುದು ಯೋಗ್ಯವಾದುದು ಅಲ್ಲ, ಅದು ಸರಿಯಾದುದು ಅಲ್ಲ ಎನ್ನುವುದನ್ನು ತಾವು ಅರ್ಥ ಮಾಡಿಕೊಂಡರೆ ಒಳ್ಳೆಯದೆಂದು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ಮಾನ್ಯ ಅಧ್ಯಕ್ಷರಾಯವರೆ ಇನ್ನೊಂದು ವಿಷಯವನ್ನು ಹೇಳಿದರು, ಅದೇನೆಂದರೆ ನಮ್ಮ ಹತ್ತಿರ 40 ಕೋಟಿ ರೂಪಾಯಿಗಳು ರಿಸರ್ವ್ ಬ್ಯಾಂಕಿನಿಂದ ಕೊಟ್ಟರತಕ್ಕಂಥದ್ದು ಇರುತ್ತದೆ ಆದ್ದರಿಂದ ಮತ್ತೆ ಪ್ರೊಕ್ಯೂರ್‌ಮೆಂಟ್ ಮಾಡಬೇಕು ಎನ್ನುವ ಯೋಚನೆ ಮಾಡಿದ್ದೇವೆಂದು ಹೇಳುತ್ತೀದ್ದಿರಿ. ಎರಡೂವರೆ ಲಕ್ಷ ಟನ್ ಇದರಲ್ಲಿ 56 ಪರ್ಸೆಂಟ್ ಪ್ರೊಕ್ಯೂರ್ ಮಾಡತಕ್ಕಂಥ ಅವಕಾಶ ನಮಗಿದೆ ಎಂದೂ, ಅದರ ಆಧಾರದ ಮೇಲೆ ಈವತ್ತು ನಷ್ಟಕ್ಕೆ ಬಂಡವಾಳವಿಲ್ಲ, ಅದಕ್ಕೋಸ್ಕರವಾಗಿ ನಮ್ಮಲ್ಲರುವ ದಾಸ್ತಾನಿನ ಅರ್ಧಭಾಗವನ್ನು ಹರಾಜು ಅಥವಾ ಮಾರಾಟ ಮಾಡುವ ಮುಖಾಂತರ ಹೊಸ ಪ್ರೊಕ್ಯೂರ್‌ಮೆಂಟ್‌ಗೆ ಬಂಡವಾಳವನ್ನು ಕೂಡಿಸಿಕೊಳ್ಳುವುದಕ್ಕಾಗಿ ಕಾತುರತೆಯಿಂದ

ಕೆಲಸವನ್ನು ಮಾಡುತ್ತಿದ್ದೇವೆ ಎನ್ನುವ ವಾದವನ್ನು ನಮ್ಮ ಮುಂದೆ ಮಂಡಿಸಿದ್ದೀರಿ. ಮತ್ತೊಂದು ವಿಷಯವೆಂದರೆ ಸದರನ್ ಜೋನ್ ಮಾಡಿಕೊಂಡ ಮೇರೆ ನಮ್ಮ ರೈನ್ ಮುಮೆಂಟಿಗೆ ಅವಕಾಶವಾಗಿದೆ ಎಂದು ಕರ್ನಾಟಕ ತಮಿಳುನಾಡು, ಆಂಧ್ರಪ್ರದೇಶ ಎಲ್ಲಿಂದ ಬೇಕಾದರೂ ತರಿಸಿಕೊಳ್ಳಲಿಕ್ಕೆ ನಿರ್ಬಂಧವಿಲ್ಲ, ಆದ್ದರಿಂದ ರೇಟು ಕೂಡ ಇಳಿಯಬಹುದು ಎನ್ನುವುದು ಒಂದು ವಾದ ಇರುತ್ತದೆ. ಆದ್ದರಿಂದ ಸರ್ಕಾರ ಬೆಲೆಯನ್ನು ಇಳಿಸಲೇ ಬೇಕಾಗುತ್ತದೆ, ಅಕ್ಕಿ ಬೆಲೆ ಕಡಿಮೆಯಾದರೆ ಮುಂದೆ ನಷ್ಟ ಸಂಭವಿಸಬಹುದು ಎನ್ನುವ ಸಮಸ್ಯೆಯನ್ನೂ ಕೂಡ ವ್ಯಕ್ತಪಡಿಸುತ್ತಾರೆ ಮಾನ್ಯ ಅಧ್ಯಕ್ಷಣಿಯವರೇ ಸರ್ಕಾರದವರು ಮೊನ್ನೆತಾನೆ ಚೆಂಡರ್‌ನ್ನು ಕರೆದಿದ್ದಾರೆ. ಈ ಚೆಂಡರ್ ರೇಟಿನ್ನು ಗಮನದಲ್ಲಿಟ್ಟುಕೊಂಡು ಮಾತನಾಡುವುದಾದರೆ ಒಂದು ಕ್ವಿಂಟಾಲ್ ಭತ್ತಕ್ಕೆ 125 ರೂಪಾಯಿ ಕೊಟ್ಟಿದ್ದಾರೆ. 125-130ಕ್ಕೆ ಇವತ್ತು ನಿಮಗೆ ಚೆಂಡರ್ ಕೊಟ್ಟು ದಾಸ್ತಾನು ಮಾಡಿ ಲಾಭ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಯಾರು ಮಾಡುವುದಿಲ್ಲ ? ಈಪತ್ತು ನಮ್ಮ ರಾಜ್ಯದಲ್ಲಿ ಮುಂದೆ ಅಕ್ಕಿ ಅಭಾವ ಬರುತ್ತದೆ, ಆಗ ಅಕ್ಕಿಯ ಬೆಲೆ ಮೊದಲಿನ ಬೆಲೆಗಿಂತ ಗಗನಕ್ಕೆ ಹೋಗುವ ಸಂಭವ ಬರುತ್ತದೆನ್ನುವುದನ್ನೂ ಕೂಡ ನೀವು ಅರ್ಥಮಾಡಿಕೊಳ್ಳಬೇಕೆಂದು ತಿಳಿಯಬಯಸುತ್ತೇನೆ.

ಮಾನ್ಯ ಸಭಾಧ್ಯಕ್ಷಣಿಯವರೇ ನಾನು ಇನ್ನು ಹೆಚ್ಚು ಕಾಲವನ್ನು ತೆಗೆದುಕೊಂಡು ಭಾಷಣವನ್ನು ಮಾಡಲಿಕ್ಕೆ ಹೋಗುವುದಿಲ್ಲ. ತಮ್ಮ ಸೂಚನೆಯ ಮೇರೆಗೆ ಕೊಟ್ಟಿರುವ ಕಾರಾವಕಾಶದಲ್ಲಿ ಇನ್ನೂ ಎರಡು ಮಾತನ್ನು ಹೇಳಿ ಮುಗಿಸುತ್ತೇನೆ ; ನಿನ್ನೆ ನಮ್ಮ ರಾಜ್ಯದ ಮೂರು ಲಕ್ಷ ಅಧಿಕಾರಿಗಳಿಗೆ ಹೆಚ್ಚಿನ ವೇತನದ ರೂಪದಲ್ಲಿ 21 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ನಾನು ಅದರ ಬಗ್ಗೆ ಗೌರವವನ್ನು ವ್ಯಕ್ತಪಡಿಸುತ್ತೇನೆ. ತಾವು ಸಭೆಯ ಕಾನ್‌ಫಿಡೆನ್ಸ್ ತೆಗೆದುಕೊಂಡ ಮೇಲೆ ಈ ಸಭೆಯಲ್ಲಿರತಕ್ಕಂಥ ಸದಸ್ಯರನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಹೇ ಕಮಿಷನ್ ರಿಪೋರ್ಟ್ ಬಂದಮೇಲೆ ಅದನ್ನು ಸಭೆಯ ಮುಂದಿಟ್ಟು ಚರ್ಚೆ ಮಾಡಬೇಕಾಗಿತ್ತು ಅದು ಕೇವಲ ನೀವು ಒಬ್ಬರೆ ಸರ್ಕಾರಿ ಅಧಿಕಾರಿಗಳ ಹಿತರಕ್ಷಣೆಯನ್ನು ಮಾಡತಕ್ಕಂಥ ಜನ, ಇತ್ತಕಡೆ ಇರತಕ್ಕ ಎಲ್ಲರು ವಿರೋಧಿಗಳು ಎನ್ನತಕ್ಕಂಥ ಭಾವನೆಯನ್ನು ತಾವು ವ್ಯಕ್ತಪಡಿಸಿದ್ದೀರಿ.ಮತ್ತೊಂದು ರೀತಿಯಿಂದ ವ್ಯಾಖ್ಯಾನ ಮಾಡುವುದಾದರೆ ಕಳೆದ ಸಾರಿಯೇ ನನ್ನ ಅಭಿಪ್ರಾಯವನ್ನು ವ್ಯಕ್ತಮಾಡಿದ್ದೇನೆ. ಈಗಲ್ಲಿ ಇದರ ಬಗ್ಗೆ ವ್ಯಾಖ್ಯಾನ ಮಾಡುವುದಾದರೆ ನಮ್ಮನ್ನು ತಿರಸ್ಕಾರ ದೃಷ್ಟಿಯಿಂದ ನೋಡುತ್ತಿದ್ದೀರಿ ಎಂದು ಹೇಳಬೇಕಾಗುತ್ತದೆ. ಏನೋ ಒಳ್ಳುವಳಿ ರೀತಿಯಲ್ಲಿ ನಾಕರರಿಗೆ ವೇತನ ಆಯೋಗದವರಿ ವರದಿಯನ್ನು ಜಾರಿಗೆ ಕೊಟ್ಟಿರುತ್ತೀರಿ. ಇದು ಸಾಮಾನ್ಯವಾಗಿ ಅರಮನೆಗಳಿಗೆ ಹೋದರೆ ಕತ್ತಾರ ಕಬ್ಬಿಣದ ತಕ್ಷಣ ಶಾಲು ಹೊದಿಸುವುದು ನಡೆದುಕೊಂಡು ಬಂದಿರತಕ್ಕಂಥ ಪರಂಪರೆಯಂತಿರುತ್ತದೆ. ಇದರೆ ಈ ಸಭೆಯನ್ನು ಇಷ್ಟೊಂದು ತಿರಸ್ಕಾರ ಮನೋಭಾವನೆಯಿಂದ ನೋಡುವುದಾದರೆ ಈ ಸಭೆಯನ್ನೇ ರದ್ದು ಮಾಡಿ. ಬರಿ ಭಾಷಣ ಮಾಡುವುದರಿಂದ ಬಡತನ ನಿವಾರಣೆಯಾಗುವುದಿಲ್ಲ ಅದಕ್ಕೋಸ್ಕರವಾಗಿ ನಾನು ಹೇಳುವುದೇನೆಂದರೆ ಮಾನ್ಯ ಕಂದಾಯ ಸಚಿವರಾದ ಶ್ರೀಮಾನ್ ಹುಚ್ಚಮಾಸ್ತಿಗೌಡರು ಒಂದು ಕೋಟಿ ಜನ ಈ ರಾಜ್ಯದಲ್ಲಿ ಭೀಕರ ಬರಗಾಲಕ್ಕೆ ತುತ್ತಾಗಿದ್ದಾರೆಂದು ಹೇಳಿದರು. ಅಂದರೆ ಐದು ಜನರ ಒಂದು ಕುಟುಂಬ ಎಂದು ಇಟ್ಟುಕೊಂಡರು ಸುಮಾರು 20 ಲಕ್ಷ ಕುಟುಂಬ ಎಂದಂತಾಯಿತು. 20 ಲಕ್ಷ ಕುಟುಂಬದ ಜನರು ಈ ಭೀಕರ ಬರಗಾಲಕ್ಕೆ ತತ್ತಾಗಿದವರೆ. ಇವರಲ್ಲಿ ನಮ್ಮ ತತ್ವ ಸರ್ಕಾರ ತತ್ವದ ಪ್ರಕಾರವಾಗಿ ಹರಿಜನ ಗಿರಿಜನ ನಿಮ್ಮ ವರ್ಗದವರು, ಹಿಂದುಳಿದವರು, ಸಣ್ಣ ಹಿಡುವಳಿದಾರರು ಎಂದು ಏನು ಕರೆದಿದ್ದಾರೆ ಅದನ್ನು ಪ್ಯಾಪ್ ಮಾಡಿ ನಮಗೆ ಒದಗಿಸಿಕೊಟ್ಟಿದ್ದಾರೆ, ಅದರ ಮಾಹಿತಿಯನ್ನು ತೆಗೆದುಕೊಂಡು ನಾನು ಕೇಳುತ್ತಿದ್ದೇನೆ. 3 ಲಕ್ಷ ಕ್ವಿಂಟಾಲ್ ಭತ್ತಕ್ಕೆ ದಾಸ್ತಾನು ಸರ್ಕಾರದ ಹತ್ತಿರ ಇದೆ ಎಂದ ಮೇಲೆ, ಒಂದೊಂದು ಕುಟುಂಬ ಒಂದೊಂದು ಕ್ವಿಂಟಾಲ್ ಅಕ್ಕಿಯನ್ನು ಕೊಟ್ಟರೆ ಜನಗಳಿಗೆ ಎಷ್ಟೋ ಉಪಕಾರವಾಗುತ್ತದೆ 20 ಲಕ್ಷ ರೂಪಾಯಿಗಳನ್ನು ಈ ಕುಟುಂಬಗಳಿಗೆ ಕೊಟ್ಟರೆ ಅದರು ಒಂದು ತಿಂಗಳು ಗಂಜಿಯನ್ನು ಕುಡಿಯುತ್ತಾರೆ. ಆನೇಕರು ಮನೆಯಿಂದ ಮನೆಗೆ ಸುತ್ತುತ್ತಿದ್ದಾರೆ. ಅವರಿಗೆ ಒಬ್ಬೊಬ್ಬರಿಗೂ ಒಂದೊಂದು ಕ್ವಿಂಟಾಲ್ ಅಕ್ಕಿಯನ್ನು ಕೊಡಿ. ಆ ಜವಾಬ್ದಾರಿಯನ್ನು ನಾನು ಬೇಕಾದರೆ ವಹಿಸಿಕೊಳ್ಳುತ್ತೇನೆ. ಅವರಿಗೆ ನೀವು ಪುಕ್ಕಟೆಯಾಗಿ ಕೊಡಬೇಡಿ. ಒಂದು ವರ್ಷದಲ್ಲಿ ಅಥವಾ ಎರಡು ವರ್ಷದಲ್ಲಿ ಅವರಿಂದ ಹಣವನ್ನು ತೆಗೆದುಕೊಳ್ಳಿ. ಏಕೆಂದರೆ ಬಡವರಿಗೆ ಒಂದೇ ಸಾರಿ

ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಅವರಿಗೆ ಸಾರ್ವತ್ರಿಕವಾಗಿ ಬೇರೆ ಕಡೆ ಸಾಲ ಹುಟ್ಟುವುದಿಲ್ಲ. ಏಕೆಂದರೆ ಅದರ ಬಗ್ಗೆ ಕಾನೂನು ಕಾಯಿದೆಗಳನ್ನು ಮಾಡಿದ್ದೀರಿ. ಇಲ್ಲಿ ನಾನು ಅದರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ ಮತ್ತು ಅದರ ಅಗತ್ಯವೂ ಇಲ್ಲ ನಮ್ಮ ರಾಜ್ಯದಲ್ಲಿ ರಿಸರ್ವ್ ಬ್ಯಾಂಕ್ ಕ್ರೆಡಿಟ್ ಲಿಮಿಟ್ ಏನಿದೆ ಅದನ್ನು 60 ಕೋಟಿ ರೂಪಾಯಿಗೆ ಹೆಚ್ಚು ಮಾಡಿ, ಆ ಮುಖೇನ ಈಗ 20 ಕೋಟಿ ರೂಪಾಯಿಗಳು ಏನಿದೆ ಅದರಲ್ಲಿ ಒಂದೊಂದು ಕುಟುಂಬಕ್ಕೆ ಒಂದೊಂದು ಕ್ವಿಂಟಾಲ್ ಅಕ್ಕಿಯನ್ನು ಕೊಡುವುದಕ್ಕೆ ಅವಕಾಶವನ್ನು ಮಾಡಿಕೊಡಿ, ನಾನು ಅವರಿಗೆ ಪುಕ್ಸಟ್ಟೆಯಾಗಿ ಕೊಡಿ ಎಂದು ಹೇಳುತ್ತಾ ಇಲ್ಲ ; ಅವರಿಗೆ ನೀವು ಸಾಲವಾಗಿ ಕೊಡಿ. ಆದ್ದರಿಂದ ಇದನ್ನು ತಾವು ಪರಿಶೀಲನೆ ಮಾಡಿ ಎಂದು ಹೇಳುತ್ತೇನೆ. ಏಕೆಂದರೆ ಅವರನ್ನು ಉಳಿಸತಕ್ಕಂಥಾದ್ದು ನಮ್ಮ ಕರ್ತವ್ಯ ಮತ್ತು ಧರ್ಮವಾಗಿದೆ. ಅವರು ಮೂಕಪ್ರಾಣಿಗಳು ಇದ್ದಹಾಗೆ ಇದ್ದಾರೆ. ಇದರ ಬಗ್ಗೆ ಮಾನ್ಯ ತಿಮ್ಮಪ್ಪನವರು ವ್ಯಾಖ್ಯಾನ ಮಾಡುತ್ತಾರೆ. ಆದ್ದರಿಂದ ಈ ನನ್ನ ಒಂದು ಸಲಹೆಯನ್ನು ಸ್ವೀಕಾರ ಮಾಡಬೇಕೆಂದು ತಿಳಿಯಬಯಸುತ್ತೇನೆ. ತಾವು ಕೊಂಡುಕೊಂಡಿರುವುದು ಕ್ವಿಂಟಾಲ್‌ಗೆ 74 ರೂಪಾಯಿಗಳಿಗೆ, ಇವತ್ತು ತಾವು ಮಾರಿರುವುದು 125 ರೂಪಾಯಿಗಳಿಗೆ. ಇದರ ಬಗ್ಗೆ ಟೆಂಡರ್ ಕರೆದು 125 ರೂಪಾಯಿಗಳಿಗೆ ಏತಕ್ಕೆ ಮಾರಾಟ ಮಾಡಬೆಕಾಗಿತ್ತು ? ಹ್ಯಾಂಡ್ಲಿಂಗ್ ಚಾರ್ಜಸ್ 25 ರೂಪಾಯಿಗಳು ಅಥವಾ 30 ರೂಪಾಯಿಗಳು ಆಗಬಹುದು. ಎಲ್ಲಾ ಸೇರಿ 100ರೂ ಆಗುತ್ತದೆ. ಸರ್ಕಾರದವರು ಇದನ್ನು ಕಳೆದುಕೊಳ್ಳಬೇಕು ಎಂದು ನಾನು ಹೇಳುವುದಿಲ್ಲ, ಇದರ ಬಗ್ಗೆ ಒಂದು ನ್ಯಾಯವಾದ ರೇಟನ್ನು ನಿಗದಿ ಮಾಡಬೇಕು. ಏಕೆಂದರೆ ಈಗ ಪರಿಸ್ಥಿತಿ ಬಹಳ ವಿಕೋಪಕ್ಕೆ ಹೋಗಿದೆ. ಆದ್ದರಿಂದ ನಮ್ಮ ರೈತರಿಗೆ ನ್ಯಾಯವಾದ ಬೆಲೆಯಲ್ಲಿ ಹಂಚಿದರೆ ಅವರಿಗೆ ಅನುಕೂಲವಾಗುತ್ತದೆ ಅವರ ಬಗ್ಗೆ ನಿಮ್ಮ ಮುಂದೆ ಬರೀ ಬಾಯಿ ಮಾತಿನಲ್ಲಿ ಹೇಳತಕ್ಕಂಥಾದ್ದು ಸರಿಯಲ್ಲ. ನಾವು ನೀವೂ ಎಲ್ಲರೂ ಅಲ್ಲಿ ಹೋಗಿ ಅಲ್ಲಿಯ ಪರಿಸ್ಥಿತಿಯನ್ನು ನೋಡೋಣ. ಆದ್ದರಿಂದ ದಯಮಾಡಿ ಇದನ್ನು ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ ಇನ್ನು ಓಪನ್ ಮಾರ್ಕೆಟ್ ಪರ್ಚೇಸ್ ಬಗ್ಗೆ ಏನು ಮಾಡಿದ್ದಾರೆ ಎಂದರೆ Out of 3 lakhs tonnes, 3 lakhs is pr cured levy (paddy) and one lakh is open market purchase 1 ಲಕ್ಷ ಟನ್ ಓಪನ್ ಮಾರ್ಕೆಟ್ ಪರ್ಚೇಸ್ ಮಾಡಿದ್ದಾರೆ. 90–100 ರೂಪಾಯಿಗಳು ಸಪ್ಲೋರ್ಟಿಂಗ್ ಪ್ರೈಸ್ ಎಂದು ಮಾಡಿದ್ದಾರೆ. ಆದ್ದರಿಂದ ಇವತ್ತು ನೀವು ದಳ್ಳಾಳಿ ಕೆಲಸವನ್ನು ಮಾಡುವುದಕ್ಕೆ ಹೋಗಬೇಡಿ. ನೀವು ದಳ್ಳಾಳಿಗಳ ಹಾಗೆ ಹಣ ಖರ್ಚು ಮಾಡುವುದನ್ನು ನಮಗಾಗಿ ಉಳಿಸಿ. ಚಂಡೀಘರ್‌ದಲ್ಲಿ ನಡೆಯತಕ್ಕಂಥ ಎ.ಐ.ಸಿ.ಸಿ ಸೆಷನ್‌ಗೆ ಕರ್ನಾಟಕ ಫುಡ್ ಕಾರ್ಪೊರೇಷನ್ ಡೈರೆಕ್ಟರ್‌ರವರು ಹೋದರು. ದೇವೇಗೌಡರಿಗೆ ಇನ್‌ವೈರ್ ನೇಷನ್ ಬರುವುದಿಲ್ಲವೆಂದು ತಿಳಿದುಕೊಂಡಿದ್ದಾರೆ. Will it bring good name to the Government ? The Director of the Karnataka Food Corporation goes to Chandigarh to attend the A. I. C. C. Session at the cost of the Karnataka Food Corporation. This is utter shameful. For this, you keep me under detention. This is the way in which the Karnataka Food Corporation has spent the money. ಇದರ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಈಗ ಕ್ಯೂಬೇಷನ್ ಅನ್ನು ಏನು ಕರೆದಿದ್ದಾರೆ ಅವನ್ನು ತಡೆಹಿಡಿಯಬೇಕು ಮತ್ತು ದಾಸ್ತಾನು ಇಟ್ಟುಕೊಳ್ಳಬೇಕು. ರಾಜ್ಯದಲ್ಲಿರತಕ್ಕಂಥ ಭೀಕರ ಪರಿಸ್ಥಿತಿಯನ್ನು ಎದುರಿಸುವುದಕ್ಕೆ ಅವಕಾಶ ಮಾಡಿಕೊಟ್ಟು, ಇವತ್ತು ಕರೆದಿರತಕ್ಕಂಥ ಎರ್ರಾ ಕ್ಯೂಬೇಷನ್‌ಗಳನ್ನು ರದ್ದು ಮಾಡಿ ದಾಸ್ತಾನು ಇಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀಮತಿ ಇ. ಇ. ವಾಜ್ (ಆಹಾರ ಪೂರೈಕೆ ಮಂತ್ರಿಗಳು).—ಮಾನ್ಯ ಸಭಾಧ್ಯಕ್ಷರೇ, ನಮ್ಮ ವಿರೋಧಪಕ್ಷದ ನಾಯಕರಾದ ಮಾನ್ಯ ದೇವೇಗೌಡರವರು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದರು. ತಮ್ಮ ಅನುಮತಿ ಪಡೆದು ನಾನು ಅದರ ಬಗ್ಗೆ ಸವಿಸ್ತಾರವಾಗಿ ಅಂಕಿ ಅಂಶಗಳ ಮೂಲಕ ಉತ್ತರವನ್ನು ಕೊಡಬೇಕಾಗಿದೆ, ನಮ್ಮ ಮಾನ್ಯ ಸದಸ್ಯರಿಗೆ ಗೊತ್ತಿದ್ದಹಾಗೆ 1975–76ನೇ ಇಸವಿಯಲ್ಲಿ ನಮ್ಮ ಕರ್ನಾಟಕ ಆಹಾರ ಇಲಾಖೆಯವರು ಕರ್ನಾಟಕ ಫುಡ್ ಕಾರ್ಪೊರೇಷನ್ ಮೂಲಕ 3, 96.847 ಟನ್ ಬತ್ತವನ್ನು ಸಂಗ್ರಹಣೆ ಮಾಡಿದ್ದಾರೆ. ಅದರಲ್ಲಿ

ರೈತರ ಲೆವಿ 2, 41, 897 ಟನ್ ಇದೆ. ಮತ್ತು ಟ್ರಾನ್ಸ್‌ಪೋರ್ಟ್ ಲೆವಿ 25, 397 ಟನ್ ಇದೆ. ಮತ್ತು ಓಪನ್ ಮಾರ್ಕೆಟ್ ಪರ್ಚೇಸ್ 1, 29, 553 ಟನ್ ಇದೆ. ಅದಲ್ಲದೆ ಬಳೀ ಜೋಳವನ್ನು 7, 501 ಟನ್ಸ್ ಸಂಗ್ರಹ ಮಾಡಿದ್ದಾರೆ. ಈ ರೀತಿ ಇರಬೇಕಾದರೆ ಮಾನ್ಯ ವಿರೋಧಪಕ್ಷದ ನಾಯಕರಿಗೆ ಈ ವಿಚಾರಗಳು ಸರಿಯಾಗಿ ತಿಳಿದಿಲ್ಲ ಎಂದು ನಾನು ಕಳಕಳಿಯಿಂದ ಹೇಳಬೇಕಾಗಿದೆ. ಇನ್ನೊಂದು ವಿಚಾರವೇನೆಂದರೆ 17-11-1976ರಿಂದೀಚೆಗೆ ನಮ್ಮ ಹತ್ತಿರ 3, 29.192 ಟನ್ಸ್ ಭತ್ತ ದಾಸ್ತಾನು ಇದೆ. ಅದರಲ್ಲಿ 1, 48, 218 ಟನ್ಸ್ ಫೈನ್, 1, 53, 915 ಟನ್ಸ್ ಮೀಡಿಯಂ ವ್ಯಾಡಿ ಮತ್ತು 27 059 ಟನ್ಸ್ ಕೋರ್ಸ್ ವ್ಯಾಡಿ ನಮ್ಮಲ್ಲಿ ಸಂಗ್ರಹವಾಗಿದೆ. ಅಲ್ಲದೆ 1 ಲಕ್ಷ ಜನಸಂಖ್ಯೆ ಇರತಕ್ಕಂಥ 13 ಪಟ್ಟಣಗಳಲ್ಲಿ ಅನೌಪಚಾರಿಕ ಪಡಿತರ ಪದ್ಧತಿ ಜಾರಿಯಲ್ಲಿದೆ. ಅವುಗಳ ಅವಶ್ಯಕತೆಯನ್ನು ನೋಡಿಕೊಂಡು ಆಹಾರಧಾನ್ಯಗಳನ್ನು ವಿತರಣೆ ಮಾಡುತ್ತಿದ್ದೇವೆ. ಸರಾಸರಿ ಲೆಕ್ಕ ಹಾಕಿದರೆ ಒಂದು ತಿಂಗಳಿಗೆ ನಮಗೆ ಬೇಕಾಗುವಂತ ಆಹಾರ ಪದಾರ್ಥಗಳ ಪ್ರಮಾಣ ಎಷ್ಟು ಎಂದರೆ 10,800 ಟನ್ಸ್ ಅಕ್ಕಿ 9, 500 ಟನ್ಸ್ ಗೋಧಿ, 12, 900 ಟನ್ಸ್ ಮಿಲೋ ಬೇಕಾಗಿದೆ 1976ರ ಜನವರಿ ಮತ್ತು ಮೇ 1976ರವರೆಗೆ ಒಟ್ಟು 12000 ಟನ್ಸ್ ಮಾತ್ರ ಆಹಾರ ವಿತರಣೆ ಆಗಿದೆ. ಬಹಿರಂಗ ಮಾರುಕಟ್ಟೆಯಲ್ಲಿ ಬೇಕಾದಷ್ಟು ಅಕ್ಕಿ ವೆಗ್ಯೆರೆ ಕಡಿಮೆ ದರದಲ್ಲಿ ಸಿಕ್ಕುವುದರಿಂದ ಮತ್ತು ಹೋದವರ್ಷ ಬಂಪರ್ ಕ್ರಾಪ್ ಆಗಿದ್ದರಿಂದ ಜನರ ಬೇಡಿಕೆ ಕಡಿಮೆಯಾಗಿದೆ. ಇಪ್ಪೊಂದು ಸ್ಟಾಕ್ ಉಳಿಯುವುದಕ್ಕೆ ಅದೇ ಕಾರಣವೆಂದು ಹೇಳುತ್ತೇನೆ ಕೇಂದ್ರ ಸರ್ಕಾರದವರು ನೀವು ಎಷ್ಟು ಬೇಡಿಕೆಯನ್ನು ಕಳಿಸಿ, ಭತ್ತವನ್ನು, ಗೋಧಿಯನ್ನು ಮತ್ತು ಮಿಲೋವನ್ನೂ ಒದಗಿಸುತ್ತೇವೆಂದು ಹೇಳಿರುವುದನ್ನು ತಾವು ಓದಿರಬಹುದು. ನಾವು ಮೇ, ಜುಲೈ ತಿಂಗಳಲ್ಲಿ ಬಿಡುಗಡೆ ಮಾಡಿದ 10, 3 0ಟನ್ಸ್ ಮಿಲೋದಲ್ಲಿ 2500 ಟನ್ಸ್ ಮಾತ್ರ ಖರ್ಚಾಗಿದೆ. ಆಗಸ್ಟ್ ತಿಂಗಳಲ್ಲಿ 12,200 ಟನ್ಸ್ ಬಿಡುಗಡೆ ಮಾಡಿದರೆ, ಖರ್ಚಾಗಿದ್ದು 3, 749 ಟನ್ಸ್ ಮಾತ್ರ. ಸೆಪ್ಟೆಂಬರ್ ತಿಂಗಳಲ್ಲಿ 13. 500 ಟನ್ಸ್ ಬಿಡುಗಡೆ ಮಾಡಿದರೆ 4000 ಟನ್ಸ್ ಮಾತ್ರ ಖರ್ಚಾಯಿತು. ಅಭಾವಪೀಡಿತ ಪ್ರದೇಶಗಳಲ್ಲಿ ಮಿಲೋ, ಜೋಳ, ಗೋಧಿ ಮಾತ್ರ ಖರ್ಚಾಗುತ್ತದೆಯೇ ಹೊರತು ಅಕ್ಕಿಗೆ ಬೇಡಿಕೆ ಇರುವುದಿಲ್ಲ. ಹಾಗೆ ನೋಡಿದರೆ ನಮಗೆ ತಿಂಗಳಿಗೆ ಸರಾಸರಿ ಈಗ ಬೇಕಾಗಿರುವುದು 10 ಸಾವಿರ ಟನ್ಸ್ ಮಾತ್ರ. ಅದರ ಪ್ರಕಾರ ನಮಗೆ ಇಡೀ ವರ್ಷಕ್ಕೆ 1,20,000 ಟನ್ಸ್ ಅಕ್ಕಿ ಮತ್ತು 1,20,000 ಟನ್ಸ್ ಬತ್ತ ಮಾತ್ರ ಆಗತ್ಯವಿದೆ. 1976-77ರಲ್ಲಿ ಈಗ ನಮ್ಮ ಹತ್ತಿರ ಇರುವ ಬೇಡಿಕೆಯನ್ನು ಮುಗಿಸಿದರೂ 1, 59, 192 ಟನ್ಸ್ ಬತ್ತ ಜಾಸ್ತಿ ದಾಸ್ತಾನು ಉಳಿಯುತ್ತದೆ. ಮಾನ್ಯ ವಿರೋಧಪಕ್ಷದ ನಾಯಕರಾದ ಮಾನ್ಯ ದೇವೇಗೌಡರವರು ಅಭಾವ ಪೀಡಿತ ಪ್ರದೇಶದಲ್ಲಿ ಮಳೆ ಸಾಲಕ್ಕೆ ಬರದೆ, ಬೆಳೆ ಸರಿಯಾಗಿ ಆಗದೆ, ಅಲ್ಲಿ ಲೆವಿ ಸಿಕ್ಕುವುದಿಲ್ಲವೆಂದು ಹೇಳಿದರು. ಅದನ್ನು ನಾನು ಒಪ್ಪುತ್ತೇವೆ. 1976-77ಕ್ಕೆ ಈ ವರ್ಷ ದಕ್ಷಿಣ ಕನ್ನಡ ಜಿಲ್ಲೆ ಮತ್ತು ರಾಯಚೂರಿನಿಂದ ನಿನ್ನೆವರೆಗೆ 10 ಸಾವಿರ ಟನ್ಸ್ ಹೊಸ ಲೆವಿ ಬಂದಿದೆ. ಇನ್ನು ಕೆಲವು ಕಡೆಗಳಿಂದ ಬರುವುದಿಲ್ಲ ಎಂದು ನಾವು ತಿಳಿದುಕೊಂಡಿದ್ದೇವೆ. ಈ ವರ್ಷ ಇನ್ನೂ 1 ಲಕ್ಷ 50 ಸಾವಿರ ಟನ್ಸ್ ಬರಬಹುದು ಎಂದೂ ಅಂದಾಜು ಮಾಡಿದ್ದೇವೆ. ಜೋಳ ಬೆಳೆಯುವ ಜಾಗದಲ್ಲಿ ಮಳೆ ಸರಿಯಾಗಿ ಆಗಿದೆ. ಆದ್ದರಿಂದ ಅಲ್ಲಿಂದ ಲೆವಿ ಬರಬಹುದು. 2½ ಲಕ್ಷ ಟನ್ಸ್ ಟಾರ್ಗೆಟ್ ಇಟ್ಟುಕೊಂಡರೂ ಹೆಚ್ಚು ಎಂದರೆ 1½ ಲಕ್ಷ ಟನ್ಸ್ ಬರಬಹುದು ಎಂದು ನಾವು ತಿಳಿದುಕೊಂಡಿದ್ದೇವೆ. ನಮ್ಮ ಹತ್ತಿರ ಎರಡೂ ಸೇರಿಸಿದರೆ ಎರಡು ಲಕ್ಷ ಟನ್ನಿನಷ್ಟು ದಾಸ್ತಾನು ಅಂದರೆ ಎರಡು ವರ್ಷದವರೆಗೆ ಒದಗಿಸುವುದಕ್ಕೆ ಸಾಕಷ್ಟು ಧಾನ್ಯ ಇದೆ ಎಂಬುದನ್ನು ಸ್ಪಷ್ಟ ಪಡಿಸುತ್ತಿದ್ದೇನೆ.

ಕೋಣಂದೂರು ಲಿಂಗಪ್ಪ.—ಎಷ್ಟು ಜನರಿಗೆ ಒದಗಿಸಲು ದಾಸ್ತಾನಿದೆ ?

ಶ್ರೀಮತಿ ಇ. ಇ. ವಾಜ್.—ತಮಗೆ ಗೊತ್ತಿರುವ ಹಾಗೆ ನಮ್ಮಲ್ಲಿ ಗೋಡೌನ್ಸ್ ಸಾಕಷ್ಟಿವೆ. ಈಗ ಅದೆಲ್ಲಾ ಭರ್ತಿಯಾಗಿದೆ. ಹೊಸ ಲೆವಿ ತಗೆದುಕೊಳ್ಳಬೇಕಾಗಿರುವುದರಿಂದ ಗೋಡಾನ್‌ನಲ್ಲಿ ಸ್ವಲ್ಪ ಜಾಗ ಖಾಲಿ ಮಾಡಬೇಕಾಗಿದೆ. ಸೌತ್‌ಕೆನರಾದಲ್ಲೂ ಕೂಡ ಗೋಡೌನ್ ಭರ್ತಿಯಾಗಿ ಜಾಗಕ್ಕೆ ಸಮಸ್ಯೆ ಆಗಿದೆ. ಆದ್ದರಿಂದ ಎಲ್ಲಂದರಾದರೂ ಖಾಲಿ ಮಾಡಿ ಹೊಸದಾಗಿ ಬರುವ ಲೆವಿ ಧಾನ್ಯವನ್ನು ಇಟ್ಟುಕೊಳ್ಳುವುದಕ್ಕೆ ಜಾಗ ಮಾಡಿಕೊಳ್ಳಬೇಕಾಗಿದೆ.

ಶ್ರೀ ಎಚ್. ಡಿ. ದೇವೇಗೌಡ.—ನನ್ನ ಜೊತೆ ಬನ್ನಿ. ಗೋಡೌನ್‌ಗೆ ಜಾಗ ತೋರಿಸುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ವಿರೋಧಪಕ್ಷದ ನಾಯಕರು ಮಧ್ಯೆ ಮಾತನಾಡುವುದು ಸರಿಯಲ್ಲ. ಕ್ಲಾರಿಫಿಕೇಷನ್ಸ್ ಬೇಕಾದರೆ ಆಹಾರ ಸಚಿವರ ಸ್ಟೇಟ್‌ಮೆಂಟ್ ಮುಗಿದಮೇಲೆ ಕೇಳಬಹುದು.

ಶ್ರೀ ಎಚ್. ಡಿ. ದೇವೇಗೌಡ.—ನನಗೆ ಡಿಸ್ಟರ್ಬ್ ಮಾಡಬೇಕು ಎಂಬ ಉದ್ದೇಶ ಇಲ್ಲ. ವಿವರಣೆ ಕೇಳುತ್ತಿದ್ದೇನೆ.

ಶ್ರೀಮತಿ ಇ. ಇ. ವಾಡ್.—ಮಾನ್ಯ ಅಧ್ಯಕ್ಷರೆ, ರಿಸರ್ವ್ ಬ್ಯಾಂಕಿನವರು ಕ್ಯಾಷ್ ಕ್ರೆಡಿಟ್ 45 ಕೋಟಿ ರೂಪಾಯಿ ಕೊಟ್ಟರು. ಅದರಿಂದ ಪೂರ್ತಿ ಹೋದವರ್ಷದ ಧಾನ್ಯ ಕೊಂಡು ಕೊಂಡಿದ್ದಾಗಿದೆ. ಇನ್ನೂ 25 ಕೋಟಿ ರೂಪಾಯಿ ಕೊಡಬೇಕು ಎಂದು ಕೇಳಿದ್ದೇವೆ ಅದಕ್ಕೆ ಅವರು ಅಷ್ಟು ದಾಸ್ತಾನು ಕೊಳ್ಳುವ ಅಗತ್ಯವಿಲ್ಲ ಅಷ್ಟು ಕೊಡುವುದಕ್ಕಾಗುವುದಿಲ್ಲ, ಬೇಕಾದರೆ 5 ಕೋಟಿ ರೂಪಾಯಿ ಕೊಡಬಹುದು ಎಂದು ಹೇಳಿದ್ದಾರೆ. ಹೊಸ ಭತ್ತ ಮತ್ತು ಜೋಳ ಇದ್ದರೆ ಅದನ್ನು ಕೊಂಡುಕೊಳ್ಳಬೇಕಾದರೆ ಕ್ರೆಡಿಟ್ ಫೆಸಲಿಟೇಸ್‌ನಿಂದ ಕೊಂಡುಕೊಳ್ಳಬೇಕಾಗಿದೆ. ರಿಸರ್ವ್ ಬ್ಯಾಂಕಿನಿಂದ ಹಣ ಬರದೇ ಇದ್ದರೆ ಗೋಡೌನ್‌ಗಳ್ಲರತಕ್ಕ ಧಾನ್ಯವನ್ನು ಡಿಸ್‌ಪೋಸ್ ಮಾಡಿ ಹೊಸದಾಗಿ ಕೊಂಡುಕೊಳ್ಳುವುದಕ್ಕೆ ಅವಕಾಶ ಮಾಡಿಕೊಳ್ಳಬೇಕಾಗಿದೆ. ನಾವು ಇಷ್ಟು ಭತ್ತವನ್ನು ದಾಸ್ತಾನು ಮಾಡುವುದಕ್ಕೆ ಕಾರಣ ಏನು ಎಂದು ತಮಗೆ ಗೊತ್ತಿದೆ. ಹೋದ ವರ್ಷ ಬೆಲೆ ಇಳಿದಿದ್ದರಿಂದ ಸಪೋರ್ಟ್ ಪ್ರೈಸ್ ಕೊಟ್ಟು ಸರ್ಕಾರದವರು ಕೊಂಡುಕೊಳ್ಳಬೇಕು ಎಂದು ಒತ್ತಡ ಬಂದುದರಿಂದ 1 ಲಕ್ಷ 29 ಸಾವಿರ ಟನ್ಸ್ ಧಾನ್ಯವನ್ನು ಸಪೋರ್ಟ್ ಪ್ರೈಸ್ ಕೊಟ್ಟು ಕೊಂಡುಕೊಂಡಿದ್ದೇವೆ. ಮಾನ್ಯ ವಿರೋಧಪಕ್ಷದ ನಾಯಕರು 84 ರೂಪಾಯಿಗೆ ಕೊಂಡು ಕೊಂಡಿದ್ದಿರಿ ಎಂದು ಹೇಳಿದರು. ಅದು ತಪ್ಪು. ನಾವು 105 ರೂಪಾಯಿವರೆಗೆ ಸಪೋರ್ಟ್ ಪ್ರೈಸ್ ಕೊಟ್ಟು ಕೊಂಡುಕೊಂಡಿದ್ದೇವೆ. ರಿಸರ್ವ್ ಬ್ಯಾಂಕಿನಿಂದ ಹಣ ತೆಗೆದುಕೊಂಡರೆ ಬಡ್ಡಿ ಹೆಚ್ಚಿಗೆ ಕೊಡಬೇಕಾಗುತ್ತದೆ ಎಂಬುದನ್ನು ನಾನು ತಮಗೆ ವಿವರಿಸಬೇಕಾಗಿಲ್ಲ, ತಮಗೆ ಗೊತ್ತಿದೆ. 60 ಕೋಟಿ ರೂಪಾಯಿ ಸಾಲ ತೆಗೆದುಕೊಂಡರೆ ಎರಡು ಲಕ್ಷ ರೂಪಾಯಿ ಬಡ್ಡಿಯನ್ನು ಒಂದು ದಿವಸಕ್ಕೆ ರಿಸರ್ವ್ ಬ್ಯಾಂಕಿನವರಿಗೆ ನಲ್ಲಿಸಬೇಕಾಗುತ್ತದೆ. ಸರ್ಕಾರದವರು ಕೊಂಡುಕೊಳ್ಳಿ ಎಂದು ಹೇಳುವುದು ಸುಲಭ. ಆದರೆ ಜವಾಬ್ದಾರಿಯನ್ನು ನಿರ್ವಹಿಸುವುದು ಕಷ್ಟವಾಗುತ್ತದೆ. ಇದ್ದ ದಾಸ್ತಾನಿನಲ್ಲಿ 33 ಸಾವಿರ ಟನ್ ಭತ್ತ ಅಂದರೆ 22 ಸಾವಿರ ಟನ್ ಅಕ್ಕಿ ರೂಪದಲ್ಲಿ ಕೇರಳ ಗವರ್ನಮೆಂಟಿಗೆ ಕೊಡಬೇಕು ಎಂದು ಫುಡ್ ಅಂಡ್ ಸಿವಿಲ್ ಸಪ್ಲೈಸ್ ಕಾರ್ಪೊರೇಷನ್‌ಗೆ ಹೇಳಿದ್ದೇವೆ. ಕೇಂದ್ರಸರ್ಕಾರದವರು ಕೂಡ ಒಪ್ಪಿಗೆ ಕೊಟ್ಟಿದ್ದಾರೆ. ಅದು ಕೊಟ್ಟರೆ ನಾಲ್ಕೂವರೆ ಕೋಟಿ ರೂಪಾಯಿ ನಮಗೆ ಬರುತ್ತದೆ. ಇದರಲ್ಲಿ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಿಂದ ಬರುವಂತಹ ಲೆವಿಯನ್ನು ಕೊಂಡುಕೊಳ್ಳುವುದಕ್ಕೆ ಏರ್ಪಾಟು ಮಾಡಿದ್ದೇವೆ. ಬರುವ ತಿಂಗಳಲ್ಲಿ ರಾಜ್ಯದ ಇತರ ಕಡೆಗಳಿಂದಲೂ ಲೆವಿ ಬರುತ್ತದೆ. ಸಾತ್ ಜೋನ್ ಮಾಡಿದಮೇಲೆ ದಿವಸಕ್ಕೆ 2-3 ಸಾವಿರ ಕ್ವಿಂಟಾಲ್ ಧಾನ್ಯ ಆಂಧ್ರದಿಂದ ನಮ್ಮ ರಾಜ್ಯಕ್ಕೆ ಬರುತ್ತದೆ. ಜನರಿಂದ ಬೇಡಿಕೆ ಕಡಿಮೆಯಾದರೆ 1 ವರ್ಷ 2ವರ್ಷ ಭತ್ತ ಇಡಬಹುದು. ಅದಕ್ಕಿಂತ ಜಾಸ್ತಿ ಇಡುವುದಕ್ಕಾಗುವುದಿಲ್ಲ. ಧಾನ್ಯಗಳನ್ನು ವಿತರಣೆ ಮಾಡುವುದಕ್ಕೆ ಅಧಿಕಾರಿಗಳಿಗೂ ಆದೇಶ ಕೊಟ್ಟಿದ್ದೇವೆ. ಸರ್ಕಾರದವರು ವ್ಯಾಪಾರಿಗಳಿಂತಾಗುವುದಕ್ಕಾಗುವುದಿಲ್ಲ. ಜನರಿಗೆ ಆದಷ್ಟು ಕಡಿಮೆ ದರದಲ್ಲಿ ಅವರ ಅನುಕೂಲಕ್ಕೆ ತಕ್ಕಂತೆ ಕೊಂಡುಕೊಳ್ಳುವುದಕ್ಕೋಸ್ಕರ ಕರ್ನಾಟಕ ಫುಡ್ ಅಂಡ್ ಸಿವಿಲ್ ಸಪ್ಲೈಸ್ ಕಾರ್ಪೊರೇಷನ್ ಮಾಡಿದ್ದೇವೆ. ವಿರೋಧಪಕ್ಷದ ನಾಯಕರು ಒಂದು ತಪ್ಪು ಹೇಳಿದರು. ಏನೆಂದರೆ ನಮ್ಮ ಒಂದು ಲಕ್ಷ ಟನ್ ರಾಗಿ ದಾಸ್ತಾನಿದೆ ಎಂದು ಹೇಳಿದರು. ರಾಗಿ ಲೆವಿ ಇಲ್ಲ ರಾಗಿಯ ಬೆಲೆ 50-60 ರೂಪಾಯಿಗೆ ಹೋದಾಗ ರೈತರಿಗೆ ತೊಂದರೆಯಾಗಬಾರದು ರೈತರ ರಕ್ಷಣೆಗೆ ಬಗಬೇಕು ಎಂದು 74 ರೂಪಾಯಿ ಕೊಟ್ಟು 10 ಸಾವಿರ ಟನ್ ರಾಗಿಯನ್ನು ಕೊಂಡು ಕೊಂಡಿದ್ದೇವೆ. ಒಂದು ಲಕ್ಷ ಟನ್ಸ್ ಅಲ್ಲ ಅದು, 1 ಲಕ್ಷ ಕ್ವಿಂಟಾಲ್ಸ್ ಅಂದರೆ 10 ಸಾವಿರ ಟನ್ಸ್. ತಿಂಗಳಿಗೆ 1 ಸಾವಿರ ಟನ್ಸ್ ಬಿಡುಗಡೆ ಮಾಡುತ್ತಿದ್ದೇವೆ. ಪೂರ್ತಿ ಎಲ್ಲಾ ಬಿಡುಗಡೆ ಮಾಡಿದರೆ 15 ದಿವಸಕ್ಕೇ ಮುಗಿದುಹೋಗುತ್ತದೆ. ಆದ್ದರಿಂದ ಸ್ವಲ್ಪ ಸ್ವಲ್ಪ ಬಿಡುಗಡೆ ಮಾಡುತ್ತಿದ್ದೇವೆ. ಈಗ ಬೆಲೆ ಏರಿದ ಸಮಯದಲ್ಲಿ ಜನರಿಗೆ ಕಡಿಮೆ ದರದಲ್ಲಿ ರಾಗಿ ಕೊಡುವುದಕ್ಕೆ ಅನುಕೂಲವಾಯಿತು.

ಶ್ರೀ ಎಚ್. ಡಿ. ದೇವೇಗೌಡ.—ರಾಗಿ ಮುಗಿದಮೇಲೆ ಏನು ಮಾಡುತ್ತೀರಿ ? ಬರೀ ಅಕ್ಕಿ ಯನ್ನೇ ಬಿಡುಗಡೆ ಮಾಡುತ್ತೀರಾ ?

ಶ್ರೀಮತಿ ಇ. ಇ. ವಾಜ್ —ಅಕ್ಕಿಯನ್ನು ಎಷ್ಟು ಬೇಕಾದರೂ ಕೊಡಲಿಕ್ಕೆ ತಯಾರಿದ್ದೇವೆ. ಮಾನ್ಯ ದೇವೇಗೌಡರು ಇನ್ನೊಂದು ವಿಷಯ ಪ್ರಸ್ತಾಪ ಮಾಡಿದರು ; ಕರ್ನಾಟಕ ಫುಡ್ ಕಾರ್ಪೊರೇಷನ್ ಡೈರೆಕ್ಟರ್‌ರವರು ಎ.ಐ.ಸಿ.ಸಿ.ಗೆ ಡರ್ಚಿ ಮಾಡುವುದಕ್ಕೆ ಹೋದರು ಎಂದು ಹೇಳಿದರು, ತಾವು ತಪ್ಪು ತಿಳಿದುಕೊಂಡಿರಬಹುದು. ಯಾವ ಡೈರೆಕ್ಟರ್ ಕೂಡ ಚಂಡೀಗಡಕ್ಕೆ ಹೋಗಿಲ್ಲ ಬೇರೆ ಕಡೆ ಎಲ್ಲಿಗೋ ಹೋದರೆ ಚಂಡೀಗಡಕ್ಕೆ ಹೋದರಾ ಎಂದು ಬೇಳುವುದು ಉಚಿತವಲ್ಲ ಎಂದು ಹೇಳಬೇಕಾಗಿದೆ ಪ್ರಾಸ್ತಿ ಉಳಿದಿರುವ ಭತ್ತವನ್ನು ಏನ ಮಾಡುವುದಕ್ಕೆ ಸಾಧ್ಯ. ಆದ್ದರಿಂದ ರಿಸರ್ವ್ ಬ್ಯಾಂಕಿನವರು ಓಪನ್ ಮಾರ್ಕೆಟ್ಟಿನಲ್ಲಿ ಕೊಂಡುಕೊಂಡಿದ್ದ ಭತ್ತವನ್ನು ಡಿಸ್‌ಪೋಸ್ ಮಾಡುವುದಕ್ಕೆ ಏರ್ಪಾಡು ಮಾಡಿ ಏಂದು ಹೇಳಿದ್ದಾರೆ. ಆದ್ದರಿಂದ ಮಹಾರಾಷ್ಟ್ರಕ್ಕೆ ಫೈನ್ ಅಕ್ಕಿ ಕೊಡುವುದಕ್ಕೆ ಏರ್ಪಾಡು ಮಾಡುತ್ತಿದ್ದೇವೆ. ಸ್ವಾಪ್ ಕಡಿಮೆ ಮಾಡಿ ಹೊಸ ಭತ್ತ ತೆಗೆದುಕೊಳ್ಳಲಿಕ್ಕೆ ಅವಕಾಶವಾಗಲಿ ಎಂದು ಆ ರೀತಿ ಮಾಡುತ್ತಿದ್ದೇವೆ. ಟೆಂಡರ್ ಕಾರ್ಪರ್ ಮಾಡಿದ್ದು ನರಿ. ಆದರೆ ಆ ಬಗ್ಗೆ ಅಂತಿಮ ನಿರ್ಧಾರ ತೆಗೆದುಕೊಂಡಿಲ್ಲ. ನಮ್ಮ ರಾಜ್ಯದ ಜನರಿಗೆ ಸಾಕಾಗುವಷ್ಟು ಆದಮೇಲೆ ಬೇರೆಯವರಿಗೆ ಡಿಸ್‌ಪೋಸ್ ಮಾಡುತ್ತೇವೆ. ಎಲ್ಲ ರೀತಿ ಮಾಡುವುದು ಅವಶ್ಯಕವಿದೆ ಅಲ್ಲ ಮಾಡಲೇ ವಿಧಿಯಲ್ಲ. ಆ ರೀತಿ ಮಾಡುವಾಗ ಎಲ್ಲಾ ವಿಷಯಗಳನ್ನು ನೋಡಿ ಪರಿಶೀಲನೆ ಮಾಡಿ ಖಂಡಿತ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ತಮ್ಮ ಮಾಹಿತಿಗೆ ತಿಳಿಸುತ್ತಿದ್ದೇನೆ. ಇಲ್ಲಿ ಗಡಿಬಿಡಿ ಆಗುವ ಪ್ರಶ್ನೆ ಇಲ್ಲ. ಮಾನ್ಯ ವಿರೋಧ ಪಕ್ಷದವರಿಗೆ ಇದರ ಬಗ್ಗೆ ಆಂಬಿಕೆ ಬೇಡ. ಸರ್ಕಾರ ಅದನ್ನು ನೋಡಿ ಎಷ್ಟರಮಟ್ಟಿಗೆ ಅವರಿಗೆ ಕೊಡುವುದಕ್ಕೆ ಆಗುತ್ತದೆ ಎಂದು ತಿಳಿದು ಆ ರೀತಿ ಮಾಡಲೇಬೇಕಾಗುತ್ತದೆ. ಎಂದಾಗ ಮಾತ್ರ ಕೊಡುವುದಕ್ಕೆ ಏರ್ಪಾಡು ಮಾಡುತ್ತೇವೆ ಎಂದು ಹೇಳುತ್ತಿದ್ದೇನೆ. 74 ರೂಪಾಯಿಗೆ ತೆಗೆದುಕೊಂಡಿದ್ದು ಅಷ್ಟಕ್ಕೇ ಮಾರಬೇಕು. ಕಾಸ್ಟ್ ವಿಷಯ ಪದೇಪದೇ ಹೇಳಬೇಕಾಗಿಲ್ಲ. ಚಾಯಿಪಾಠ ಆಗಿದೆ.

ಶ್ರೀ ಎಚ್. ಡಿ. ದೇವೇಗೌಡ.—ಅದು ಬಡ್ ಅವೌಂಟ್. ಪಬ್ಲಿಕ್ ಡಿಸ್ಟ್ರಿಬ್ಯೂಷನ್ ರೇಟಲ್ಲ.

ಶ್ರೀಮತಿ ಇ. ಇ ವಾಜ್.—ನಾನು ತಮಗೆ ಹೇಳುವುದೇನೆಂದರೆ ರಿಸರ್ವ್ ಬ್ಯಾಂಕಿನಿಂದಾಗಲೀ ಅಥವಾ ಬೇರೆ ಬ್ಯಾಂಕುಗಳಿಂದಾಗಲೀ ಸಾಲ ತೆಗೆದುಕೊಂಡರೆ ಬಡ್ಡಿ ಕೊಡಬೇಕು. ಅವರು ಹಾಗೆಯೇ ಕೊಡುವುದಿಲ್ಲ. ಆದ್ದರಿಂದ ಹೆಚ್ಚು ಸಾಲ ತೆಗೆದುಕೊಂಡರೆ ಎಷ್ಟರಮಟ್ಟಿಗೆ ಖರ್ಚು ಬೀಳುತ್ತದೆ ಎಂಬುದು ತಮಗೆ ಗೊತ್ತಿದೆ. ತಾವು ಟೀಕೆ ಮಾಡುತ್ತೀರಿ ಎಂದು ಹೇಳುತ್ತಿಲ್ಲ. ಸರ್ಕಾರದವರು ಏನಾದರೂ ಮಾಡಿದರೆ ಜನಸಾಮಾನ್ಯರಿಗೆ ನಿಜವಾಗಿ ಅನುಕೂಲವಾಗುವ ರೀತಿಯಲ್ಲಿ ಮಾಡುತ್ತಾರೆ ಎಂಬ ಮನೋಭಾವವನ್ನು ತಾವು ಇಟ್ಟುಕೊಳ್ಳಬೇಕು ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಎರಡು ಮಾತುಗಳನ್ನು ಹೇಳಿದರು. ಒಂದು, ಕಳೆದಸಾರಿ ಕೊಂಡಿರತಕ್ಕ ಭತ್ತ ಖರ್ಚಾಗಿಲ್ಲ, ಹಾಗೆಯೇ ಇದೆ, ಖರ್ಚಾಗಿರತಕ್ಕುದ್ದು 10 ಸಾವಿರ ಟನ್ಸ್ ಮಾತ್ರ ಎಂದು ಹೇಳಿದರು. ಕಳೆದ ಸಾರಿ ಬೇರೆ ಕಡೆ ಅವಶ್ಯಕತೆ ಇರಲಿಲ್ಲ, ಆದ್ದರಿಂದ ಯಾರೂ ಕೊಳ್ಳಲಿಲ್ಲ. ಇವತ್ತು ತಮಗೆ ಗೊತ್ತಿದೆ ಸರ್ಕಾರಿಂದ ವರದಿ ಪ್ರಕಾರ 15 ಜಿಲ್ಲೆಗಳು ಅಭಾವಕ್ಕೆ ಒಳಗಾಗಿವೆ. ಒಂದು ಕೋಟಿ ಜನರಿಗೆ ಆಹಾರ ಒದಗಿಸತಕ್ಕ ಪರಿಸ್ಥಿತಿ ಇದೆ. ಕೇವಲ ಮೈದಾನ ಪ್ರದೇಶದಲ್ಲಿ ಮಾತ್ರವಲ್ಲ, ಮಲೆನಾಡು ಪ್ರದೇಶಗಳಲ್ಲೂ ಕೂಡ ಭತ್ತವನ್ನು ಕೊಂಡು ಜೀವನ ಮಾಡತಕ್ಕ ಪರಿಸ್ಥಿತಿ ಇದೆ. ಒಂದು ಕೋಟಿ ಜನರಿಗೆ 9 ತಿಂಗಳ ಕಾಲ ಜೀವನ ನಡೆಸಲಿಕ್ಕೆ ಆಹಾರ ಒದಗಿಸತಕ್ಕ ಜವಾಬ್ದಾರಿ ಇದೆ. ಅವರೇ ಹೇಳುತ್ತಾರೆ, ಬರತಕ್ಕ ವರ್ಷದಲ್ಲಿ 60 ಪರ್ಸೆಂಟ್ ಮಾತ್ರ ರೆವಿ ಸಂಗ್ರಹಣೆ ಆಗಬಹುದು ಎಂದು.

ಶ್ರೀಮತಿ ಇ. ಇ. ವಾಜ್.—ನಮ್ಮಲ್ಲಿ ದಾಸ್ತಾನು ಇದೆ.

ಶ್ರೀ ಕಾಗೋಡು ತಿಮ್ಮಪ್ಪ.—ತಾವು ಸಂಗ್ರಹಣೆ ಮಾಡಿರತಕ್ಕ ಭತ್ತ 6 ತಿಂಗಳಲ್ಲಿ ಸಂಪೂರ್ಣವಾಗಿ ಖರ್ಚಾಗುತ್ತದೆ.

ಜೊತೆಗೆ ಹಾನಗರ್, ಬ್ಯಾಡಗಿ ಮತ್ತು ಹಾವೇರಿ ಭಾಗಗಳಲ್ಲಿ ಸಂಪೂರ್ಣವಾಗಿ ಮಳೆ ಹೋಗಿ ಭತ್ತವೇ ಆಗಿಲ್ಲವೆಂದು ಮಾನ್ಯ ಬಂಗಾರಪ್ಪನವರು ಹೇಳುತ್ತಿದ್ದರು. ಅಲ್ಲಿ ಭತ್ತವನ್ನೇ ಹೆಚ್ಚಾಗಿ ಉಪಯೋಗಿಸುತ್ತಾರಾದ್ದರಿಂದ ಸೊರಬ ತಾಲ್ಲೂಕಿಗೆ ಒಂದು ಕ್ವಿಂಟಾಲ್ ಭತ್ತಕ್ಕೆ 150 ರೂಪಾಯಿ ಕೊಟ್ಟು ಕೊಳ್ಳುತ್ತಾರೆ. ಇವತ್ತಿನ ದಿವಸ, ಹೆಚ್ಚು ಭತ್ತ ಬೆಳೆಯುವಂತಹ ಪ್ರದೇಶದವರು ಬೇರೆ ಕಡೆ ಹೋಗಿ ಭತ್ತ ಕೊಳ್ಳುವ ಪರಿಸ್ಥಿತಿ ಬಂದಿರುವಾಗ ನೀವು ಹಣ ಕಾಸಿನ ತೊಂದರೆ ಇದೆ, ಗೋಡೌನ್ ತೊಂದರೆ ಇದೆ, ಎಂಬ ಕಾರಣಗಳಿಂದ ಈ ತೀರ್ಮಾನ ಕೈಗೊಳ್ಳುವುದಾದರೆ ನಾಳೆ ದಿವಸ ನಿಮ್ಮ ಭವಿಷ್ಯವನ್ನು ಬಹಳ ಕೆಟ್ಟ ರೀತಿಯಲ್ಲಿ ಎದುರಿಸಬೇಕಾದ ಪ್ರಶ್ನೆ ಇದೆ. ಗೋಡೌನ್ ಅವಶ್ಯಕತೆಯನ್ನು ಪೂರೈಸುವುದಕ್ಕೆ ಪ್ರಯತ್ನ ಪಟ್ಟರೆ ಏನು ತೊಂದರೆ ಇಲ್ಲ. ಯಾವ ಯಾವುದೋ ಬಿಲ್ಡಿಂಗ್‌ಗಳನ್ನು ತೆಗೆದುಕೊಳ್ಳದೆ ಇರತಕ್ಕ ಗೋಡೌನ್‌ಗಳಲ್ಲಿ ಸಮಸ್ಯೆಯನ್ನು ಬಗೆಹರಿಸಬಹುದು. ಅವರು ಹೇಳುವ ಪ್ರಕಾರ ಒಂದು ಕೋಟಿ ಜನರನ್ನು ಸಾಕುವುದಕ್ಕೆ 3-4 ತಿಂಗಳಲ್ಲಿ 4-5 ಕೋಟಿ ರೂಪಾಯಿ ಬಡ್ಡಿ ಕೊಡತಕ್ಕ ಸ್ಥಿತಿ ಬಂದು ಉಚ್ಚಾನಾಗಬಹುದು.

11-00 A. M.

ಶ್ರೀಮತಿ ಇ. ಇ. ವಾಡ್.—ಆ ಜವಾಬ್ದಾರಿಯನ್ನು ತಿಳಿದುಕೊಂಡೆ ಈ ವ್ಯವಸ್ಥೆಯನ್ನು ಮಾಡಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಮುಂದೆ ಬರತಕ್ಕ 3 ತಿಂಗಳಲ್ಲಿ 5 ಅಲ್ಲ 10 ಕೋಟಿ ರೂಪಾಯಿ ಬಡ್ಡಿ ಕೊಟ್ಟರೂ ಚಿಂತೆ ಇಲ್ಲ, ಸಾಧ್ಯವಾದಷ್ಟು ದಾಸ್ತಾನು ಮಾಡಿ, ಅಷ್ಟು ದಾಸ್ತಾನನ್ನು ಕೂಡ ಕ್ವಿಂಟಾಲಿಗೆ 130 ರೂಪಾಯಿ ಕೊಟ್ಟು ಕೊಳ್ಳತಕ್ಕ ಜನರು ನಮ್ಮ ಕರ್ನಾಟಕದಲ್ಲಿ ಇದ್ದಾರೆ; ಇವತ್ತಿನ ಪರಿಸ್ಥಿತಿ ಆ ರೀತಿ ಇವೆ. ಆದರೆ ನೀವು ಮಾಡಿರುವ ವಿಷಯಗಳನ್ನು ನ್ಯಾಯವಾಗಿ ಒಪ್ಪತಕ್ಕದ್ದಲ್ಲ, ಈ ಸನ್ನಿವೇಶದಲ್ಲಿ ದಯವಿಟ್ಟು ಮಾರಾಟ ಮಾಡುವುದನ್ನು ಕೈಬಿಟ್ಟು ಬೇರೆ ರೀತಿಯಲ್ಲಿ ಹೇಗೆ ಹಣ ಸಂಗ್ರಹಣೆ ಮಾಡಬೇಕು, ಹೇಗೆ ಗೋಡೌನ್‌ಗಳನ್ನು ಓದಗಿಸಬೇಕೆಂಬುದನ್ನು ಪರಿಶೀಲನೆ ಮಾಡಬೇಕು. ಇವತ್ತಿನ ದಿವಸ ಭತ್ತ ಬೆಳೆಯುವಂತಹ ಮಲೆನಾಡು ಪ್ರದೇಶಗಳಲ್ಲಿ ಶೇಕಡ 50 ಭಾಗಕ್ಕಿಂತಲೂ ಹೆಚ್ಚಾಗಿ ಎಲ್ಲಿಯೂ ಭತ್ತವನ್ನು ಬೆಳೆದಿಲ್ಲ. ಆದರೆ ಅವರು ಕಳೆದ ವರ್ಷದ ಅರ್ಧ ಭಾಗವನ್ನಾದರೂ ಸಂಗ್ರಹಣೆ ಮಾಡುತ್ತೇವೆಂದು ಹೇಳಿದರಲ್ಲ ಅದು ಸುಳ್ಳು. ಅಧಿಕಾರ ದುರುಪಯೋಗಮಾಡಿಕೊಂಡು, ಯಾರ ಮನೆಯನ್ನಾದರು ಲೂಟಿ ಮಾಡಿ ಸಂಗ್ರಹಣೆ ಮಾಡಬಹುದೇ ಏನಹ ನ್ಯಾಯವಾಗಿ ಸಂಗ್ರಹಣೆ ಮಾಡುವುದಕ್ಕಾಗುವುದಿಲ್ಲ. ಉದಾಹರಣೆಗೆ ನಿಮ್ಮ ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಷ್ಟು ಬೆಳೆದಿದ್ದಾರೆ, ಎಷ್ಟು ಕೊಡುವುದಕ್ಕೆ ಸಾಧ್ಯ ಎಂಬುದನ್ನು ನೋಡಿದರೆ, ಈ ಸಾರಿ ನೀವು ಎಷ್ಟು ಸಂಗ್ರಹಣೆ ಮಾಡುತ್ತೇವೆಂದು ಊಹೆ ಇಟ್ಟುಕೊಂಡಿದ್ದೀರಿ ಅಷ್ಟನ್ನು ಮಾಡಲು ಆಗುತ್ತದೆಯೇ ಎಂಬುದು ಗೊತ್ತಾಗುತ್ತದೆ ಫ್ಯಾಮಿಲಿ ಫ್ಯಾನಿಂಗ್‌ಗೆ ಬರತಕ್ಕಾರ ಮಾಡುವ ರೀತಿಯಲ್ಲಿ ಮಾಡಬಹುದೇ ಏನಹ ಅಲ್ಲಿನ ಸ್ಥಿತಿಗತಿಗಳನ್ನು ಅರಿತುಕೊಂಡು ಸಂಗ್ರಹಣೆ ಮಾಡುವುದಕ್ಕಾಗುವುದಿಲ್ಲ ಆದಕಾರಣ ದಯವಿಟ್ಟು ಇರುವ ದಾಸ್ತಾನನ್ನು ಮಾರಾಟ ಮಾಡದಂತೆ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಸಿ. ಬೈರೇಗೌಡ.—ಮಾನ್ಯ ಮಂತ್ರಿಗಳು ಗೋಧಿ ಮತ್ತು ಮೈಲೋವನ್ನು ರಿಲೀಸ್ ಮಾಡಿದ ಬಗ್ಗೆ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಆದರೆ ಅದು ಪೂರ್ತಿ ಲಭ್ಯ ಆಗದೆ ಇರುವುದಕ್ಕೆ ಕಾರಣವೇನೆಂದರೆ ಜನಕ್ಕೆ ಬೇಕಿಲ್ಲ ಎಂದು ಹೇಳಿದ್ದಾರೆ. ಇವತ್ತಿನ ದಿವಸ ವಾಸ್ತವವಾಗಿ ಅಂಥ ಪರಿಸ್ಥಿತಿ ಇಲ್ಲ. ಇದೇ ರೀತಿ ಕಳೆದ 3-4 ತಿಂಗಳಿಂದ ರಿಲೀಸ್ ಮಾಡಿರತಕ್ಕ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಈಗ ಏನಾಗಿದೆ ಎಂದರೆ ದಿನ ಕಳೆದ ಹಾಗೆ ಪರಿಸ್ಥಿತಿ ಭೀಕರವಾಗುತ್ತಿದೆ. ಇಂಥ ಪರಿಸ್ಥಿತಿಯನ್ನನುಸರಿಸಿ ಎಷ್ಟು ಟನ್ನನ್ನು ರಿಲೀಸ್ ಮಾಡಬೇಕೆಂದು ಯೋಚನೆ ಮಾಡಿದ್ದಾರೋ ನನಗಂತೂ ಗೊತ್ತಿಲ್ಲ. ಈಗ ಯಾವ ಬೆಳೆ ಬಂದಿದೆ ಮತ್ತು ಕ್ರೊಟೇಶನ್ ಎಷ್ಟಕ್ಕೆ ಬಂದಿದೆ ಎಂದು ಹೇಳಲಲ್ಲ. ದಯವಿಟ್ಟು ಅದನ್ನು ಹೇಳಿದರೆ ಅನುಕೂಲವಾಗುತ್ತದೆ; ಏಕೆಂದರೆ ಇವತ್ತು ಬೆಳೆಯುವವರಿಗೆ ಭತ್ತ ಇಲ್ಲ. ಇವತ್ತು ಕೋರಾರ, ತುಮಕೂರು, ಬೆಂಗಳೂರು ಜಿಲ್ಲೆಗಳಲ್ಲದೆ ಮಲೆನಾಡು ಕಡೆಯಲ್ಲೂ ಸಹ ಬೆಳೆ ಆಗಿಲ್ಲ. ಮಲೆನಾಡಿನ ಶೇಕಡ 60-70 ಭಾಗದಲ್ಲಿ

ಮಳೆ ಇಲ್ಲದೆ ಬೆಳೆ ಒಣಗಿದೆ ಮುಂದೆ ಬರತಕ್ಕ ದಿನಗಳು ಭೀಕರವಾಗಿವೆ ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದಹಾಗೆ 5-6 ಕೋಟಿ ರೂಪಾಯಿ ಖರ್ಚಾದರೂ ಚಿಂತೆ ಇಲ್ಲ ನಮ್ಮ ರಾಜ್ಯದ ಜನತೆಯ ಪ್ರಾಣವನ್ನು ಉಳಿಸುವುದು ಬಹಳ ಮುಖ್ಯವಾದ ವಿಚಾರ. 5-6 ಕೋಟಿ ರೂಪಾಯಿ ಖರ್ಚಾಗುವುದು ಮುಖ್ಯವಲ್ಲ. ಆ ಕಾರಣದಿಂದ ಈಗ ಏನು ಕೊಟೇಶನ್ ಕರೆದಿದ್ದೀರಿ ಅದನ್ನು ರದ್ದು ಮಾಡಿ ನಮ್ಮ ರಾಜ್ಯದ ಜನರ ಪ್ರಾಣವನ್ನು ಉಳಿಸುವುದು ತಮ್ಮ ಮೊದಲನೆ ಕರ್ತವ್ಯವಾಗಬೇಕು. ತಾವು ಇನ್‌ಫಾರ್ಮರ್ ರೇಶನಿಂಗ್ ಏರಿಯಾದಲ್ಲಿ ಕೊಟ್ಟಿರತಕ್ಕ ಅಂಕಿ ಅಂಶಗಳನ್ನು ಕೊಟ್ಟಿದ್ದೀರಿ. ಇವತ್ತಿನ ದಿವಸ ರಾಜ್ಯದ 15 ಜಿಲ್ಲೆಗಳಲ್ಲಿ ಪೂರ್ತಿಯಾಗಿ ಇನ್‌ಫಾರ್ಮರ್ ರೇಶನ್ನನ್ನು ಕೊಡತಕ್ಕ ಅವಶ್ಯಕತೆ ಇದೆ. ಆದ ಕಾರಣ ಸರ್ಕಾರದವರು ಇದನ್ನು ಗಮನಿಸಿ, ಈಗ ರಿಲೀಸ್ ಮಾಡುವುದಕ್ಕೆ ಮತ್ತು ಮಾರಾಟ ಮಾಡುವುದಕ್ಕೆ ತೆಗೆದು ಕೊಂಡಿರತಕ್ಕ ನಿರ್ಧಾರವನ್ನು ಬದಲಾವಣೆ ಮಾಡಿ ಕೊನೆಪಕ್ಷ 3-4 ತಿಂಗಳವರೆಗೆ ರದ್ದು ಮಾಡಿ ಆಮೇಲೆ ಪರಿಸ್ಥಿತಿ ಉತ್ತಮಗೊಂಡರೆ ಯೋಗ್ಯವಾದ ಕ್ರಮವನ್ನು ತೆಗೆದುಕೊಂಡರೆ ಒಳ್ಳೆಯದಾಗುತ್ತದೆ. ಆ ಕೆಲಸವನ್ನು ದಯವಿಟ್ಟು ಮಾಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸಬಯಸುತ್ತೇನೆ.

ಶ್ರೀಮತಿ ಇ. ಇ. ವಾಜ್.—ಅಭಾವ ಪೀಡಿತ ಪ್ರದೇಶಗಳಿಗೆ ಹೆಚ್ಚಾಗಿ ಆಹಾರಧಾನ್ಯಗಳು ಬೇಕಾಗುತ್ತದೆ ಎಂಬುದು ಗೊತ್ತಿದೆ. ಆ ತಿಂಗಳಿನಲ್ಲಿ ಅಂಥ ಪ್ರದೇಶಗಳಿಗೆ 15 ಸಾವಿರ ಟನ್ ಬೇಕಾದರೂ ಕೊಡುತ್ತೇವೆ; ಅಕ್ಕಿ ಬೇಕೆ, ಗೋಧಿ ಬೇಕೆ, ರಾಗಿ ಬೇಕೆ, ಯಾವುದು ಬೇಕಾದರೂ ಕೊಡುತ್ತೇವೆ.

ಶ್ರೀ ಸಿ. ಬೈರೇಗೌಡ.—ಅದನ್ನು ಒಪ್ಪುವುದಕ್ಕಾಗುವುದಿಲ್ಲ. ಕೋಲಾರ ಜಿಲ್ಲೆಯಲ್ಲಿ ಅಕ್ಕಿ ಇಲ್ಲ, ಅಲ್ಲಿಗೆ ಎಷ್ಟು ಕೊಟ್ಟಿದ್ದೀರಿ ?

ಶ್ರೀಮತಿ ಇ. ಇ. ವಾಜ್.—ಮಾನ್ಯ ಸದಸ್ಯರು ಅವರವರ ಜಿಲ್ಲೆಗಳಿಗೆ ಏನೇನು ಬೇಕು, ಎಷ್ಟೆಷ್ಟು ಬೇಕೆಂದು ತಿಳಿಸಿದರೆ ಅಷ್ಟನ್ನು ಒದಗಿಸುವ ಏರ್ಪಾಡು ಮಾಡುತ್ತೇನೆ. ನಿಮಗೆ ಅಕ್ಕಿ ಬೇಕೆ, ರಾಗಿ ಬೇಕೆ, ಗೋಧಿ ಬೇಕೆ, ಏನು ಬೇಕಾದರೂ ಒಂದು ವಾರದೊಳಗೆ ನಿಮ್ಮ ಬೇಡಿಕೆಯನ್ನು ಪೂರೈಸುತ್ತೇನೆ, ಅವನ್ನು ನಿಮ್ಮ ಸಹಕಾರ ಸಂಘಗಳ ಮೂಲಕ ವಿತರಣೆ ಮಾಡಿಸುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ನಮ್ಮ ಜಿಲ್ಲೆಯ ಜಿಲ್ಲಾಧಿಕಾರಿಗಳು ಎಷ್ಟು ಬರೆದಿದ್ದಾರೋ ಅಷ್ಟನ್ನು ರಿಲೀಜ್ ಮಾಡಿದ್ದೇವೆಂದು ಹೇಳಿದರೆ ಸಾಕು. The demand placed by the Deputy Commissioner and the actual quantity released ಫಿಗರ್ಸ್ ಕೊಡಿ. ಸರ್ಕಾರವು ಆಡಳಿತ ನಡೆಸುವಾಗ ಕೆಲವು ಸಮೀಕ್ಷೆಗಳನ್ನು ನೋಡಿಕೊಂಡು ಹೋಗಬೇಕಾಗುತ್ತದೆಯೇ ಹೊರತು ಕಷ್ಟವನ್ನು ಹೇಳುವುದಕ್ಕಾಗುವುದಿಲ್ಲ. ರೇಟು ನೂಕ್ ಆಗಬೇಕು, ಸಾಲಕ್ಕೆ ಬಡ್ಡಿ ಕೊಡುತ್ತಿದ್ದೇವೆ, ಈ ಎಲ್ಲ ಸಬೂಬುಗಳನ್ನು ನಭೆ ಒಪ್ಪಿಕೊಳ್ಳುವುದಿಲ್ಲ. ಸಹಕಾರಿ ಪಕ್ಷದವರು ಅಂದರೆ ವಿರೋಧ ಪಕ್ಷದವರು ಹೇಳುತ್ತೇವೆ, ನಿಮ್ಮ ನಷ್ಟವನ್ನೆಲ್ಲ ತುಂಬಿಕೊಡುತ್ತೇವೆ, ಗೋಡೌನ್ ಕಾಸ್ಟ್ ಕೊಡುತ್ತೇವೆ, ನೀವು 4 ತಿಂಗಳ ಕಾಲ ದಾಸ್ತಾನನ್ನು ಹಿಡಿಯಿರಿ, ನಂತರ ಪರಿಸ್ಥಿತಿ ನೋಡಿಕೊಂಡು ವಿತರಣೆ ಮಾಡಿರಿ.

ಶ್ರೀ ಟಿ. ಆರ್. ಶಾಮಣ್ಣ.—ಟೆಂಡರ್ ಕರೆದ ಮೇಲೆ ಮಾರುಕಟ್ಟೆಯಲ್ಲಿ ಅಕ್ಕಿಯ ಬೆಲೆ 20 ರೂಪಾಯಿ ಏರಿದೆ. ಇದರಿಂದ ಬಹಳ ಜನಗಳಿಗೆ ಕಷ್ಟವಾಗುತ್ತದೆ. ಇದನ್ನು ಜಾಗ್ರತೆ ತಡೆಗಟ್ಟಬೇಕು.

ಶ್ರೀಮತಿ ಇ. ಇ. ವಾಜ್.—ಮಾನ್ಯ ವಿರೋಧ ಪಕ್ಷದ ನಾಯಕರು ಈಗಿನ ಪರಿಸ್ಥಿತಿಯನ್ನು ಹೇಳಿ ಎಂದು ಹೇಳಿದ್ದಾರೆ. ಹಾಸನ ಜಿಲ್ಲೆಯಲ್ಲಿ ಅಕ್ಟೋಬರ್ 1976 ರಲ್ಲಿ ಬಿಡುಗಡೆ ಮಾಡಿದ್ದು 580 ಟನ್ ಅಕ್ಕಿ, 250 ಟನ್ ರಾಗಿ, ಗೋಧಿ 400 ಟನ್ ಕೊಂಡದ್ದರಲ್ಲಿ 115 ಟನ್ ಬಿಡುಗಡೆ ಮಾಡಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ನೀವು ಜೋಳ ತಿನ್ನುತ್ತೀರಾ ?

ಶ್ರೀಮತಿ ಇ. ಇ. ವಾಜ್.—ಅಗತ್ಯ ಇದ್ದರೆ ತಿನ್ನುತ್ತೇವೆ. ನಾವು 580 ಟನ್ ಅಕ್ಕಿ ಬಿಡುಗಡೆ ಮಾಡಿದ್ದರೆ ಜೊತೆಗೆ ಪುನಃ 28 ಟನ್ ತೆಗೆದುಕೊಂಡಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ರೆವಿ ಪ್ರೊಕ್ಯೂರಮೆಂಟ್ ರೇಟ್ ಖಂಡಿತ ಆಗುವುದಿಲ್ಲ, ನೀವು ಫೆಬ್ರುವರಿವರೆಗೆ ಕಾಯ್ದರೆ ರೆವಿ ಪೊಸಿಷನ್ ಗೊತ್ತಾಗುತ್ತದೆ. ಸರ್ಕಾರದಲ್ಲಿ ಪಡಿತರ ಸ್ಟಾಕ್ ಇದ್ದರೆ ಮಾರ್ಕೆಟ್ ಮೇಲೆ ಪರಿಣಾಮವಾಗುತ್ತದೆ. ಶಿವಮೊಗ್ಗದಿಂದ ಪರ್ಮಿಟ್ ಸಿಸ್ಟಂ ಮೇಲೆ ಯಾವ ಯಾವ ಕಡೆಗೆ ಎಷ್ಟೆಷ್ಟು ಅಕ್ಕಿ ಹೋಗುತ್ತದೆಂದು ತೀರ್ಮಾನ ತೆಗೆದುಕೊಂಡ ಮಾರನೇ ದಿವಸವೇ ಶಿವಮೊಗ್ಗ, ಸಾಗರ, ಮಂಡ್ಯ ಮಾರ್ಕೆಟ್‌ಗಳಲ್ಲಿ ಕೇಳಿದರೆ 20 ರೂಪಾಯಿ ಜಾಸ್ತಿ ಯಾಗಿರುತ್ತದೆ

ತೀರ್ಮಾನ ಮಾಡಿದ ಕೂಡಲೇ ಕೆಲವರು ಮಿರ್ ಮಾಲೀಕರು ಹಾಗೂ ವ್ಯಾಪಾರ ಮಾಡತಕ್ಕ ಜನ ಸೇರಿ ಈಗ ಇದ್ದಂತಹ ರೇಟನ್ನು ಜಾಸ್ತಿ ಮಾಡಿದ್ದಾರೆ. ಕಳೆದ ಒಂದು ತಿಂಗಳು ಹಾಗೂ 15 ದಿವಸದಿಂದ ಈಚೆಗೆ ಶಿವಮೊಗ್ಗ ಮಾರ್ಕೆಟ್ಟಿನಲ್ಲಿ ರೇಟ್ ಎಷ್ಟು ಜಾಸ್ತಿಯಾಗಿದೆ ಎಂಬ ಬಗ್ಗೆ ಅಂಕಿ ಅಂಶಗಳನ್ನು ತರಿಸಿಕೊಂಡು ನೋಡಿ ಆ ಮೇಲೆ ವಿಚಾರ ಮಾಡಿ.

ಶ್ರೀಮತಿ ಇ. ಇ. ವಾಜ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಿಗೆ ತಿಳಿಸಬೇಕಾದರೆ ಶಿವಮೊಗ್ಗದಿಂದ ಕೆಲವರು ರೈತರು ಬಂದು ಬೇಗ ಕೊಂಡುಕೊಳ್ಳುವುದಕ್ಕೆ ಏರ್ಪಾಡು ಮಾಡ ಬೇಕೆಂದು ಹೇಳಿದರು.

ಶ್ರೀ ಕಾಗೋಡು ತಿಮ್ಮಪ್ಪ,—ಅವರು ರೈತರು ಅಲ್ಲ; ಮಿರ್ ಮಾಲೀಕರು.

ಶ್ರೀ ಸಿ. ಬೈರೇಗೌಡ.—ಯಾವ ರೇಟಿಗೆ ಯಾವ ಕ್ಯಾಂಟಿಟಿ ಕೊಂಡುಕೊಳ್ಳಬೇಕೆಂದು ತೀರ್ಮಾನವಾಗಿದೆ ?

ಶ್ರೀ ಹೆಚ್. ಡಿ. ದೇವೇಗೌಡ.—ರೇಟ್ ಹೇಳಿ.

ಶ್ರೀಮತಿ ಇ. ಇ. ವಾಜ್.—ಸರ್ಕಾರಕ್ಕೆ ರಾಭದ ದೃಷ್ಟಿಯೇನೂ ಇಲ್ಲ. ಹೋಲ್ಡಿಂಗ್ ಕಾಸ್ಟ್ ಏನು ಇದೆ. ಅದನ್ನು ಕೊಟ್ಟು ತೆಗೆದುಕೊಳ್ಳುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ,—ಅಧ್ಯಕ್ಷರೇ, ನಾವು ಯಾವತ್ತೂ ಬತ್ತ ಕೊಳ್ಳುವವರಲ್ಲ; ಈ ಸಾರಿ ಮಲೆನಾಡಿನಲ್ಲಿಯೂ ಬೆಳೆಯಾಗದೇ ಬತ್ತ ಕೊಳ್ಳುವ ಪರಿಸ್ಥಿತಿ ಬಂದಿದೆ; ಇವರು ನೋಡಿದರೆ ಕಥೆ ಹೇಳುತ್ತಿದ್ದಾರೆ.

Re : Promise of Payment of a month's salary as bonus to the staff of the Legislature secretariat.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳು ಹೇಳುವುದು ಮಂತ್ರಿಯವರು ಪರಿಶೀಲನೆ ಮಾಡಿದರೆ ಚನ್ನಾಗಿ ಕಾಣುತ್ತದೆಂದು ಹೇಳುತ್ತೇನೆ. ಅಧ್ಯಕ್ಷರೇ, ಮಾನ್ಯ ಕೃಷ್ಣರವರು ಬಂದಿದ್ದಾರೆ; ನಿನ್ನೆ ಕೂಡ ಈ ಪ್ರಶ್ನೆ ಎತ್ತಿದೆ. ಈ ಮನೆಯಲ್ಲಿ ಮಾನ್ಯ ಕೃಷ್ಣರವರು ಭರವಸೆ ಕೊಟ್ಟಿದ್ದಾರೆ; ಏನು ಎಂದರೆ ರೆಜಿಸ್ಟ್ರೇಟರ್ಸ್ ಸೆಕ್ರೆಟೇರಿಯೇಟ್‌ನ ರಿಪೋರ್ಟರ್ಸ್‌ಗೂ ಹಾಗೂ ಸಿಬ್ಬಂದಿಗೆ ಒಂದು ತಿಂಗಳ ಸಂಬಳ ಕೊಡುತ್ತೇವೆಂದು ಒಪ್ಪಿಕೊಂಡಿದ್ದರು, ಈ ವಿಚಾರದಲ್ಲಿ ಎರಡು ಸಲ ಪ್ರಶ್ನೆ ಮಾಡಿದ್ದಕ್ಕೆ ಪರಿಶೀಲನೆ ಮಾಡುತ್ತೇನೆ ಎಂದು ಹೇಳಿದರೂ ಇದುವರೆಗೂ ಸಹ ಕಾರ್ಯಗತಕ್ಕೆ ಬಂದಿಲ್ಲ; ಯಾರು ಎಲ್ಲಿ ಕೊಕ್ಕೆ ಹಾಕಿದ್ದಾರೋ ಗೊತ್ತಿಲ್ಲ ಬಜೆಟ್ ಅಧಿವೇಶನದಲ್ಲಿ ಹೆಚ್ಚಿನ ಸಮಯ ಕೆಲಸ ಮಾಡಿದ್ದಕ್ಕೆ ಒಂದು ತಿಂಗಳ ಸಂಬಳ ಕೊಡುತ್ತೇವೆಂದು ಮೇ ತಿಂಗಳಲ್ಲಿ ಹೇಳಿದರು. ಆದರು ಕೊಟ್ಟಂತಹ ಭರವಸೆಯನ್ನು ಕಾರ್ಯಗತ ಮಾಡಲಿಲ್ಲ. ಏತ ಕೋನ್ಸ್ಕರ ಮಾಡಲಿಲ್ಲ; ಕೊಡುವುದಕ್ಕೆ ಆಗದೇ ಹೋದರೆ ಏನು ತಕರಾರು ಇದೆ ಎಂಬುದನ್ನಾದರೂ ಹೇಳಲಿ.

ಶ್ರೀ ಎಸ್. ಎಂ. ಕೃಷ್ಣ.—ಕೊಡಬೇಕು ಕೊಡುತ್ತೇವೆ.